PRGI No: KNKAN/26/A1167

ವಿಜಯನಗರ – ಕೊಪ್ಪಳ – ಬಳ್ಳಾರಿ – ರಾಯಚೂರು ಜಿಲ್ಲೆಗಳಲ್ಲಿ ಏಕ ಕಾಲಕ್ಕೆ ಪ್ರಕಟಿತ

# ಹೊಸಪೇಟೆ ನಾಡಿಮಿಡಿತ

# HOSAPETE NAADIMIDITHA

ಸುದ್ದಿ ಜಾಹೀರಾತಿಗಾಗಿ ಸಂಪರ್ಕಿಸಿರಿ
ಮೊ: 9980107729
9845757747
9538367319

ಸಂಪಾದಕರು : ರಾಮಜಿ ನಾಯ್ಕ್ ಆರ್
ವ್ಯವಸ್ಥಾಪಕ ಸಂಪಾದಕರು : ಬಿ ಹೆಚ್ ಎಸ್ ರಾಜು
ಸಹ ಸಂಪಾದಕರು : ವಿ ಗಾಳೆಪ್ಪ

Editor : Ramjee Naik R

KANNADA DAILY NEWS PAPER ವಿಜಯನಗರ ಆವೃತ್ತಿ ಕನ್ನಡ ದಿನಪತ್ರಿಕೆ POSTAL REG NO : PMG/KA/NK/BLY/05/2026-2028

Vol.–01 Issue–193 14/10/2026 Wednesday Rs.02/– E-mail:hosapetenadimidita@gmail.com ಸಂಪುಟ–01ಸಂಚಿಕೆ–193 ಬುಧವಾರ 14/10/2026ಬೆಲೆ ರೂ.02/–

### 15 ದಿನದಲ್ಲಿ ರೂ1 ಕೋಟಿಗೂ ಅಧಿಕ ಬಿಲ್ ಪಾವತಿ

# KTPP ನಿಯಮ ಉಲ್ಲಂಘಿಸಿ ಬಿಲ್ ಮಂಜೂರು ಆರೋಪ, ಜಿಲ್ಲಾಧಿಕಾರಿಗೆ ದೂರು

ಹೊಸಪೇಟೆ,13– ವಿಜಯನಗರ ಜಿಲ್ಲೆಯ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಸಾಮಾನ್ಯ ನಿಧಿಯ ಬಳಕೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಿಲ್‌ಗಳ ಪಾವತಿಯಲ್ಲಿ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಲು ಕರ್ನಾಟಕ ಲೋಕಾಯುಕ್ತಕ್ಕೆ ಹಾಗೂ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಕೆಯಾಗಿದೆ.




2026ರ ಅಕ್ಟೋಬರ್ 3ರಂದು ಸಲ್ಲಿಸಿರುವ ದೂರಿನಲ್ಲಿ, ಪಟ್ಟಣ ಪಂಚಾಯಿತಿಯ ಪ್ರಭಾರ ಮುಖ್ಯಾಧಿಕಾರಿಗಳ ಕಾರ್ಯವೈಖರಿ ಹಾಗೂ ಸಾಮಾನ್ಯ ನಿಧಿಯಿಂದ ಹಣ ಬಿಡುಗಡೆ ಮಾಡಿರುವ ಪ್ರಕ್ರಿಯೆ ಕುರಿತು ಹಲವು ಗಂಭೀರ ಆಕ್ಷೇಪಗಳನ್ನು ವ್ಯಕ್ತಪಡಿಸಲಾಗಿದೆ. ಸುಮಾರು 42 ಲಕ್ಷ ಮೊತ್ತದ ಬಿಲ್‌ಗಳು ತರಾತುರಿಯಲ್ಲಿ ಬಿಡುಗಡೆ ಮಾಡಿ ಮಂಜೂರಾತಿ ನೀಡಿದ್ದಾರೆ ಈ ಮಂಜುರಾತಿಯನ್ನು ಕಡ್ಡಾಯವಾಗಿ ಇರಬೇಕಾದ ಪೌರ ಸಮಿತಿ ನಿರ್ಣಯಗಳು, ಮಾನ್ಯತೆ ಪಡೆದ ಕಾರ್ಯಾದೇಶಗಳ, ಸೂಕ್ತ ತಾಂತ್ರಿಕ ಮಂಜೂರಾತಿ ಹಾಗೂ ಸಾರ್ವಜನಿಕ ಕಾಮಗಾರಿಯ ಭೌತಿಕ ಪರಿಶೀಲನೆ ಇಲ್ಲದೆ ಮಾಡಲಾಗಿದೆ, ಹಾಗಾಗಿ ನಿಯಮ ಉಲ್ಲಂಘಿಸಿ ಮಂಜೂರು ಮಾಡಿರುವುದು ಸೇರಿದಂತೆ ವಿವಿಧ ಕಾಮಗಾರಿಗಳ ಬಿಲ್‌ಗಳ ಕುರಿತು ಪರಿಶೀಲನೆ ನಡೆಸಬೇಕೆಂದು ಪಟ್ಟಣ ಪಂಚಾಯಿತಿ ಸದಸ್ಯರಾದ ಬಿ ಎಂ ಎಸ್ ರಾಜು, ಪರುಶುರಾಮ, ಮರಡಿ ಸುರೇಶ, ಹಾಗೂ ಸ್ಥಳೀಯ ಮುಖಂಡ ಕಾಳಿ ಮಂಜುನಾಥ ರವರು ದೂರು ಸಲ್ಲಿಸಿದ್ದಾರೆ.

> ಸಾರ್ವಜನಿಕ ಹಣಕಾಸಿನ ವ್ಯವಹಾರಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಈ ದೂರಿನ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದು ಸಾರ್ವಜನಿಕರ ನಿರೀಕ್ಷೆಯಾಗಿದೆ. ಆರೋಪಗಳ ಕುರಿತು ಅಧಿಕೃತ ತನಿಖೆ ಅಥವಾ ಸಂಬಂಧಪಟ್ಟ ಅಧಿಕಾರಿಗಳ ಪ್ರತಿಕ್ರಿಯೆ ಇನ್ನೂ ಆರಂಭವಾಗಿಲ್ಲ. "ಸದಸ್ಯರ ದೂರಿನ ಕುರಿತು ಪರಿಶೀಲಿಸಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು"
>
> **– ಕವಿತಾ ಎಸ್ ಮಣ್ಣಿಕೇರಿ, ವಿಜಯನಗರ ಜಿಲ್ಲಾಧಿಕಾರಿಗಳು.**

ಕಾಮಗಾರಿಗಳ ಬಿಲ್‌ಗಳ ಬಗ್ಗೆ ಅನುಮಾನ: ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದಿರುವ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್‌ಗಳು, ಮಾಪನ ಪುಸ್ತಕಗಳು ಹಾಗೂ ಪಾವತಿ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕೆಂದು ದೂರಿನಲ್ಲಿ ಕೋರಲಾಗಿದೆ. ಕೆಲವೇ ದಿನಗಳ ಅಂತರದಲ್ಲಿ ವಿವಿಧ ಮೊತ್ತಗಳ ಬಿಲ್‌ಗಳನ್ನು ಪಾವತಿಸಿರುವ ಕುರಿತು ಅನುಮಾನ ವ್ಯಕ್ತಪಡಿಸಿರುವ ಸದಸ್ಯರು, ಕಾಮಗಾರಿಗಳ ನೈಜ ಸ್ಥಿತಿ ಹಾಗೂ ದಾಖಲೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವಂತೆ ಆಗ್ರಹಿಸಿದ್ದಾರೆ.

ದೂರಿನಲ್ಲಿ 17 ಲಕ್ಷ, 5 ಲಕ್ಷ ಹಾಗೂ 3 ಲಕ್ಷ ಅಲ್ಲದೇ ಖಾಸಗಿ ಕಂಪನಿಗಳಿಗೆ ಕಾನೂನು ಬಾಹಿರವಾಗಿ

> "1ಕೋಟಿ ಹಣ ವರ್ಗಾವಣೆ ಯಾಗಿರುವ ವಿಚಾರದಲ್ಲಿ ಯಾವುದೇ ಅಕ್ರಮ ನಡೆದಿಲ್ಲ, ಯಾವುದೇ ಬಿಲ್ಲುಗಳನ್ನು ಪಾವತಿ ಮಾಡುವಾಗ ಸಭೆಗೆ ತರಬೇಕೆಂದೇನಿಲ್ಲ, ಪಾವತಿ ಯಾದ ನಂತರ ಯಾವುದಕ್ಕೆ ಪಾವತಿ ಮಾಡಲಾಗಿದೆ ಎಂದು ಪೌರ ಸಮಿತಿ ಸಭೆಗೆ ತರಬೇಕಿರುತ್ತದೆ. ಸದಸ್ಯರ ದೂರಿನ ಕುರಿತು ಅಕ್ರಮ ನಡೆದಿದೆ ನಡೆದಿಲ್ಲ ಎಂದು ಹೇಳಲು ಸಾಧ್ಯವಿಲ್ಲ ದುರಿಗೂ ಮುಂಚೆ ಸ್ಪಷ್ಟೀಕರಣ ತೆಗೆದುಕೊಳ್ಳಬೇಕಾಗಿತ್ತು."
>
> **–ಗರಡಿ ಕಳಕ ಮಲ್ಲೇಶ್, ಮುಖ್ಯಾಧಿಕಾರಿ ಪ.ಪಂ. ಮ. ಮ.ಹಳ್ಳಿ.**

ಸೇರಿದಂತೆ ವಿವಿಧ ಬಿಲ್ ಗಳ ಮೊತ್ತ ಪಾವತಿಸಲಾಗಿರುವ ಬಗ್ಗೆಯೂ ಉಲ್ಲೇಖಿಸಲಾಗಿದೆ. ಸುಮಾರು 15 ದಿನಗಳ ಅವಧಿಯಲ್ಲಿ ಒಟ್ಟು ಒಂದು ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳ ಬಿಲ್‌ಗಳ ವಹಿವಾಟು ನಡೆದಿದೆ ಈ ಕುರಿತು ತನಿಖೆ ನಡೆಸಬೇಕೆಂದು ಮನವಿ ಮಾಡಲಾಗಿದೆ.

ಕೆಟಿಪಿಪಿ ಕಾಯ್ದೆ ಉಲ್ಲಂಘನೆಯ ಆರೋಪ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪೌರತ್ವ ಕಾಯ್ದೆ (KTPP) ಮತ್ತು ಪಟ್ಟಣ ಪಂಚಾಯಿತಿಯ ಸಂಬಂಧಿತ ನಿಯಮಗಳನ್ನು ಲ್ಲಂಘಿಸಿ ನಕಲಿ ಬಿಲ್ಲುಗಳನ್ನು ಸಿದ್ದಪಡಿಸಿ ಹಣ ಮಂಜೂರು ಮಾಡಲಾಗಿದೆ ಎಂಬ ಆರೋಪ ವ್ಯಕ್ತವಾಗಿದೆ. ಕಾಮಗಾರಿಗಳ ಟೆ–ಂಡರ್ ಪ್ರಕ್ರಿಯೆ,ಕಾರ್ಯಾದೇಶಗಳು, ಮಾಪನ ದಾಖಲೆಗಳು ಹಾಗೂ ಬಿಲ್‌ಗಳ ಅನುಮೋದನೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ನಿಯಮ ಉಲ್ಲಂಘನೆಯಾಗಿದ್ದರೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

ಸಮಗ್ರ ತನಿಖೆಗೆ ಒತ್ತಾಯ ಸಾರ್ವಜನಿಕ ಹಣದ ದುರುಪಯೋಗವಾಗಿರುವ ಸಾಧ್ಯತೆಯನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ವಿಶೇಷ ತನಿಖೆ ನಡೆಸಿ, ತಪ್ಪಿತಸ್ಥರು ಕಂಡುಬಂದರೆ ಕಾನೂನುಬದ್ಧ ಕ್ರಮ ಜರುಗಿಸಬೇಕು ಎಂದು ದೂರುದಾರರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

> "ಜಿಲ್ಲಾಧಿಕಾರಿಗಳ ಟಪಾಲಿಗೆ ದೂರು ಸಲ್ಲಿಸಿ10 ದಿನ ಕಳೆದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ತಿಳಿಯದು. ಜಿಲ್ಲಾಧಿಕಾರಿಗಳಿಂದ ಪಾರದರ್ಶಕ ಆಡಳಿತ ಮತ್ತು ತನಿಖೆ ನಿರೀಕ್ಷೆ ಇದೆ.
>
> **– ಬಿಎಂಎಸ್ ರಾಜು ಸದಸ್ಯರು, 4ನೇ ವಾರ್ಡ್ ಮ.ಮ.ಹಳ್ಳಿ.**

# ಡಣಾಪುರ : ವಿಬಿಜಿರಾಮ್‌ಜಿ ಕೂಲಿಕಾರರ ಆರೋಗ್ಯ ತಪಾಸಣೆ

ಹೊಸಪೇಟೆ, 13– ಹೊಸಪೇಟೆ ತಾಲೂಕಿನ 114 ಡಣಾಪುರ ಗ್ರಾಮ ಪಂಚಾಯತಿಯಲ್ಲಿ ನಡೆಯುತ್ತಿರುವ ವಿಬಿ ಜಿ ರಾಮ್ ಜಿ ಕಾಮಗಾರಿ ಸ್ಥಳದಲ್ಲಿ ಸೋಮವಾರ ಕೂಲಿಕಾರರ ಆರೋಗ್ಯ ತಪಾಸಣೆ ನಡೆಸಲಾಯಿತು.



ಗ್ರಾಮ ಪಂಚಾಯತಿ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ 114 ಡಣಾಪುರ ಗ್ರಾಮದ ಹೊರವಲಯದಲ್ಲಿ ವಿಬಿ ಜಿ ರಾಮ್ ಜಿ ಯೋಜನೆಯಡಿ ಕೈಗೊಂಡಿರುವ ವ್ಯಾಸನಕೆರೆ ಗ್ರಾಮದ ಕೆರೆ ಪುನಶ್ಚೇತನ ಕಾಮಗಾರಿ ಸ್ಥಳದಲ್ಲಿ ಸೋಮವಾರ ಜರುಗಿದ ಕೂಲಿ ಕಾರ್ಮಿಕರ ಉಚಿತ ಆರೋಗ್ಯ ತಪಾಸಣೆ ಶಿಬಿರ–ಕ್ಕೆ ಚಾಲನೆ ನೀಡಿ ಮಾತನಾಡಿದ ತಾ.ಪಂ. ನ ಐಇಸಿ ಸಂಯೋಜಕರಾದ ಹೆಚ್. ನಾಗರಾಜ, ಪ್ರತಿಯೊಬ್ಬರೂ ಉಚಿತ ಆರೋಗ್ಯ ತಪಾಸಣೆ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು. ಕೆಲಸದ ಜೊತೆಗೆ ತಮ್ಮ ಆರೋಗ್ಯದ ಕಡೆಗೂ ಹೆಚ್ಚಿನ ಗಮನಹರಿಸಬೇಕು ಎಂದರು.

ಪ್ರಸಕ್ತ ವರ್ಷ ಹೆಚ್ಚಿನ ಬಿಸಿಲು ಇದೆ. ಬಿಸಿಲಿನ ತಾಪಮಾನ ದಿಂದ ಕೂಲಿಕಾರರಿಗೆ ತೆಲೆ ಸುತ್ತು, ರಕ್ತದ ಒತ್ತಡ ಹೆಚ್ಚಳ ಹೀಗೆ ನಾನಾ ಅನಾರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುತ್ತದೆ. ಅದೇ ರೀತಿ ಕೂಲಿಕಾರರು ದಿನವಿಡಿ ಕೆಲಸದಲ್ಲಿ ತೊಡಗಿರುವುದರಿಂದ ಆಸ್ಪತ್ರೆಗಳಿಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳಲು ಸಮಯದ ಕೊರತೆ ಎದುರಿಸುತ್ತಾರೆ. ಈ ಹಿನ್ನಲೆಯಲ್ಲಿ ಶಿಬಿರದಲ್ಲಿ ರಕ್ತದೊತ್ತಡ, ಸಕ್ಕರೆ ಕಾಯಿಲೆ, ವಾಂತಿ, ಭೇದಿ ಪ್ರಕರಣದ ಕುರಿತು ತಪಾಸಣೆ ಮಾಡಲಾಗುತ್ತಿದೆ. ಕೂಲಿಕಾರರು ಶಿಬಿರದ ಸದುಪಯೋಗ ಪಡೆದು ಕೊಳ್ಳಬೇಕು ಎಂದು ತಿಳಿಸಿದರು.

ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ ಡಾ.ರಾಧಾಕೃಷ್ಣ ಮಾತನಾಡಿ, ಶ್ರಮಿಕರು ಕೇವಲ ದೈನಂದಿನ ಕೂಲಿಯನ್ನಷ್ಟೇ ಗಮನಿಸದೆ, ತಮ್ಮ ದೇಹದ ಸ್ವಾಸ್ಥ್ಯದ ಕಡೆಗೂ ಗಮನ ನೀಡಬೇಕು. ಸಣ್ಣ ಪುಟ್ಟ ಕಾಯಿಲೆಗಳೆಂದು ನಿರ್ಲಕ್ಷ್ಯ ವಹಿಸಿದರೆ ಭವಿಷ್ಯದಲ್ಲಿ ದೊಡ್ಡ ಮಟ್ಟದ ಆರೋಗ್ಯ ಸಮಸ್ಯೆ ಎದುರಿಸಬೇಕಾಗುತ್ತದೆ. ಕಾಲ ಕಾಲಕ್ಕೆ ರಕ್ತದೊತ್ತಡ, ಮಧುಮೇಹ ಸೇರಿದಂತೆ ಅಗತ್ಯ ಪರೀಕ್ಷೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ತಪಾಸಣೆಗಳನ್ನು ಮಾಡಿಸಿಕೊಳ್ಳುವಂತೆ ತಿಳಿಸಿದರು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನಿರ್ದೇಶನ ಹಾಗೂ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಜರುಗಿದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನವೀನ್, ಫಾರ್ಮಸಿ ಅಧಿಕಾರಿ ಜೇಷ್ಠ, ಆರೋಗ್ಯ ನಿರೀಕ್ಷಣಾಧಿಕಾರಿ ಭಾಸ್ಕರ್, ಅನಿಲ್, ಸದ್ದಾಂ ಹುಸೇನ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶಾರದಮ್ಮ, ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದು. ಕೂಲಿ ಕಾರ್ಮಿಕರ ಆರೋಗ್ಯ ತಸಾಸಣೆ ನಡೆಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ ಕಾರ್ಯದರ್ಶಿ ಜಿ.ನಾಗರಾಜ್, ಡಿಇಒ ಸೋಮಣ್ಣ. ಬಿಎಫ್‌ಟಿ ಶಿವಾನಂದ, ಜಿಕೆಎಂ ಮಂಜುಳಾ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.

# ಸಿನಿಮಾಗಳ ಮೂಲಕ ಸಾಮಾಜಿಕ ವಾಸ್ತವಗಳ ಅನಾವರಣ – ಡಾ. ವೆಂಕಟಗಿರಿ ದಳವಾಯಿ



ಹಂಪಿ, 13– ಇಂದಿನ ಕಾಲಘಟ್ಟದಲ್ಲಿ ಹೊಸ ತಂತ್ರಜ್ಞಾನಗಳನ್ನು ಕಲಿಯುವುದು ಮತ್ತು ಅವುಗಳನ್ನು ಸೂಕ್ತವಾಗಿ ಬಳಸಿಕೊಳ್ಳುವುದು ಅತ್ಯಂತ ಮುಖ್ಯ. ವಿಶೇಷವಾಗಿ ಮಕ್ಕಳಿಗೆ ತಂತ್ರಜ್ಞಾನದ ಸೌಲಭ್ಯಗಳು ಶಿಕ್ಷಣಕ್ಕೆ ಪೂರಕವಾಗಿ ದೊರೆಯಬೇಕು. ಆನ್‌ಲೈನ್ ತರಗತಿಗಳಿಗೆ ಅನುಕೂಲವಾಗುವಂತೆ ಸರ್ಕಾರವು ಮಕ್ಕಳಿಗೆ ಉಚಿತವಾಗಿ ಮೊಬೈಲ್‌ಗಳನ್ನು ಒದಗಿಸುವುದರ ಜೊತೆಗೆ, ಅವುಗಳಲ್ಲಿ ಶೈಕ್ಷಣಿಕ ಉದ್ದೇಶದ ಅಪ್ಲಿಕೇಶನ್‌ಗಳನ್ನು ಅಳವಡಿಸಿ ನೀಡುವ ವ್ಯವಸ್ಥೆ ಮಾಡಬೇಕು ಎಂಬ ಆಶಯವನ್ನು ಡಾ. ವೆಂಕಟಗಿರಿ ದಳವಾಯಿ&ಟಿಛಿ;ಅವರು ವ್ಯಕ್ತಪಡಿಸಿದರು.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ವತಿಯಿಂದ ನಮ್ಮ ನೋಟ–19 ಕಾರ್ಯಕ್ರಮದ ಅಂಗವಾಗಿ ಕನ್ನಡದ ಅಲೆಗಳು ಹೇಳಿದ ಕಥೆ&ಟಿಛಿ;ಹಾಗೂ&ಟಿಛಿ; ಹಿಂದಿಯ&ಟಿಛಿ;ಮುಂಬೈ ವಾರಣಾಸಿ ಎಕ್ಸ್‌ಸ್ ಸಿನಿಮಾಗಳ ಪ್ರದರ್ಶನ ಮತ್ತು ಚರ್ಚಾ ಕಾರ್ಯಕ್ರಮ ಅಲ್ಲಮ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ವೆಂಕಟಗಿರಿ ದಳವಾಯಿ ಅವರು ವಹಿಸಿ ಮಾತನಾಡುತ್ತಾ; ಅಲೆಗಳು ಹೇಳಿದ ಕಥೆ&ಟಿಛಿ;ಸಿನಿಮಾವು ಒಂದು ಕಡೆ ಬಡತನವನ್ನೂ ಮತ್ತೊಂದು ಕಡೆ ಶ್ರೀಮಂತಿಕೆಯ ದರ್ಪವನ್ನೂ ಅನಾವರಣಗೊಳಿಸುತ್ತದೆ. ಉಳ್ಳವರು ಜನರ ಬೇಡಿಕೆಗಳನ್ನು ಹಾಗೂ ಅವರ ಸ್ವಂತ ಬದುಕಿನ ಆಧಾರವಾಗಿರುವ ಸಾಧನಗಳನ್ನು ಅವರಿಂದಲೇ ಹೇಗೆ ನಾಶಪಡಿಸುತ್ತಾರೆ ಎಂಬುದನ್ನು ಈ ಸಿನಿಮಾ ಪರಿಣಾಮಕಾರಿಯಾಗಿ ತೋರಿಸುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಕುಶಲಕರ್ಮಿಗಳು ಎದುರಿಸುವ ಸಂಕಷ್ಟಗಳು ಮತ್ತು ಸವಾಲುಗಳನ್ನು ಸಿನಿಮಾ ಕಟ್ಟಿ–ಕೊಡುತ್ತದೆ ಎಂದು ಹೇಳಿದರು.

ಮುಂಬೈ ವಾರಣಾಸಿ ಎಕ್ಸ್‌ಸ್ ಸಿನಿಮಾ ಕುರಿತು ಮಾತನಾಡುತ್ತಾ; ಈ ಸಿನಿಮಾ ಧಾರ್ಮಿಕ ನಂಬಿಕೆಗಳು ಮತ್ತು ಬದುಕಿನ ಅರ್ಥವನ್ನು ಅನ್ವೇಷಿಸುತ್ತದೆ. ದೇವರು ಮತ್ತು ಧರ್ಮದ ವಿಷಯ ಬಂದಾಗ ಮನುಷ್ಯರು ಬಹಳ ಸರಳವಾಗಿ ನಡೆದುಕೊಳ್ಳುತ್ತಾರೆ. ಆದರೆ ತಮ್ಮದೇ ಬದುಕಿನ ನೆಲೆಯಲ್ಲಿ ತಮ್ಮ ಅಸ್ತಿತ್ವವನ್ನು ಅರಿತುಕೊಂಡು, ಜೀವನವನ್ನು ಅರ್ಥಪೂರ್ಣವಾಗಿ ರೂಪಿಸಿಕೊಳ್ಳುವ ಸಾಧ್ಯತೆಯನ್ನೂ ಪರಿಶೀಲಿಸಬೇಕು ಎಂದು ಅಭಿಪ್ರಾಯಪಟ್ಟರು.

ಮನುಷ್ಯನು ಸಹಜೀವಿಗಳೊಂದಿಗೆ ಸಹಬಾಳ್ವೆ ನಡೆಸುತ್ತಾ ಇಡೀ ಜೀವಜಾಲವನ್ನು ಗಮನದಲ್ಲಿಟ್ಟುಕೊಂಡು ಬದುಕನ್ನು ಕಟ್ಟಿಕೊಳ್ಳಬೇಕು. ವೈರಾಗ್ಯದ ಮನೋಭಾವದಲ್ಲಿದ್ದ ವ್ಯಕ್ತಿ ನಂತರ ಜೀವನೋತ್ಸಾಹವನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ಸಾವು ಎದುರಾಗುವ ವೈರುಧ್ಯವನ್ನು ಈ ಸಿನಿಮಾ ತೋರಿಸುತ್ತದೆ ಎಂದು ವಿಶ್ಲೇಷಿಸಿದರು.

ಈ ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ಗೋವಿಂದ ಉಪಸ್ಥಿತರಿದ್ದರು. ಡಾ. ಕೆ.ಎಂ. ರೂಪ, ಪಿ.ಡಿ.ಎಫ್ ಸಂಶೋಧನಾರ್ಥಿ ಹಾಗೂ ಮಂಜುಳ ಮಣ್ಣೂರ್, ಸಂಶೋಧನಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಟಿಪ್ಪಣಿ ಮಂಡಿಸಿದರು ಹಾಗೂ ಖಾಜಾ ಸಾಬ್, ಪ್ರವೀಣ್ ಕಿತ್ನೂರ್, ಕುಮಾರ್ ಡಿ.ಬಿ, ರಘು, ಪತ್ರಿಕೋದ್ಯಮ ವಿಭಾಗ ಇನ್ನಿತರರು ಚರ್ಚೆಯಲ್ಲಿ ಭಾಗವಹಿಸಿದರು. ಸಂಚಾಲಕರು ಹಾಗೂ ಸಂಶೋಧನಾರ್ಥಿ;ಶಬ್ರೀನಬಾನು ಮಕರಬ್ಬಿ ನಿರ್ವಹಿಸಿದರು. ವಿವಿಧ ವಿಭಾಗಗಳ ಡೀನರು, ಬೋಧಕರು ಹಾಗೂ ಆಡಳಿತ ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗೆ ನಿರ್ಬಂಧ : ದೆಹಲಿ ಪೊಲೀಸರ ಕ್ರಮಕ್ಕೆ ಎಐಡಿಎಸ್‌ಒ ಖಂಡನೆ



ಹೊಸಪೇಟೆ, 13 – ರಾಷ್ಟ್ರ ರಾಜಧಾನಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುವುದಕ್ಕೆ ದೆಹಲಿ ಪೊಲೀಸರು ನಿರ್ಬಂಧ ವಿಧಿಸಿರುವ ಕ್ರಮವನ್ನು ಎಐಡಿಎಸ್‌ಒ ವಿಜಯನಗರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಯು. ಉಮಾದೇವಿ ಅವರು, ಕೇಂದ್ರದ ಬಿಜೆಪಿ ಸರ್ಕಾರವು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ದೆಹಲಿ ಪೊಲೀಸರನ್ನು ಬಳಸಿಕೊಂಡು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಲು ಮುಂದಾಗಿದೆ ಎಂದು ಆರೋಪಿಸಿದ್ದಾರೆ.

ಈಗಾಗಲೇ ಎಸ್‌ಐಆರ್ (SIR) ವಿರುದ್ಧ ನಡೆಯುತ್ತಿರುವ ಹೋರಾಟವನ್ನು ತಡೆಯುವ ಉದ್ದೇಶದಿಂದ ರಾಷ್ಟ್ರ ರಾಜಧಾನಿ ದೆಹಲಿಯನ್ನೇ ತೆರೆದ ಸೆರೆಮನೆಯನ್ನಾಗಿ ಮಾಡಲಾಗಿದೆ ಎಂದು ಅವರು ದೂರಿದ್ದಾರೆ. ಅಕ್ಟೋಬರ್ 10ರಿಂದ ಜಂತರ್ ಮಂತರ್‌ಗೆ ಆಗಮಿಸಲು ಯತ್ನಿಸುತ್ತಿರುವ ಹೋರಾಟಗಾರರನ್ನು ಪೊಲೀಸರು ಬಂಧಿಸುತ್ತಿದ್ದು, ಇದೀಗ ಪ್ರತಿಭಟನೆ ನಡೆಸುವುದಕ್ಕೂ ನಿರ್ಬಂಧ ವಿಧಿಸಿರುವುದು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಭಟಿಸುವ ಹಕ್ಕಿನ ಮೇಲಿನ ದಾಳಿಯನ್ನು ವಿರೋಧಿಸಿ ದೇಶದ ಜನತೆ ಹಾಗೂ ವಿದ್ಯಾರ್ಥಿಗಳು ಪ್ರಬಲ ಹೋರಾಟ ನಡೆಸಬೇಕು ಎಂದು ಎಐಡಿಎಸ್‌ಒ ಕರೆ ನೀಡಿದೆ.

# ಜನ – ಜಾನುವಾರುಗಳಿಗೆ ಕುಡಿಯುವ ನೀರು, ಮೇವು ಕೊರತೆಯಾಗದಿರಲಿ : ಡಿಸಿ

ವಿಜಯನಗರ (ಹೊಸಪೇಟೆ), 13– ಜಿಲ್ಲೆಯಲ್ಲಿ ಮುಂದುವರಿದಿರುವ ಭೀಕರ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ವಿಚಾರಗಳಲ್ಲಿ ಯಾವುದೇ ಲೋಪವಾಗದಂತೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನಿಕೇರಿ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರ ನಿರ್ವಹಣೆ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಂಗಾರು ಮಳೆ ಕೈಕೊಟ್ಟ ಕಾರಣ ಜಿಲ್ಲೆಯಲ್ಲಿ ಭೀಕರ ಬರಗಾಲ ಆವರಿಸಿದೆ. ಈ ನಿಟ್ಟಿನಲ್ಲಿ ಕುಡಿಯುವ ನೀರನ್ನು ಮಿತವಾಗಿ ಬಳಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ನೀರು ವ್ಯರ್ಥವಾಗಿ ಹರಿದು ಪೋಲಾಗುವುದನ್ನು ತಡೆಯಬೇಕು. ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ತೀವ್ರ ನೀರಿನ ಕೊರತೆ ಉಂಟಾದಲ್ಲಿ ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆದು ನೀರು ಪೂರೈಕೆಗೆ ಕ್ರಮ ವಹಿಸಬೇಕು. ಕೊಳವೆ ಬಾವಿ ಲಭ್ಯವಾಗದಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಬೇಕು ಎಂದು ನಿರ್ದೇಶಿಸಿದರು.

ಜಾನುವಾರುಗಳಿಗೆ ಮೇವು, ನೀರಿನ ವ್ಯವಸ್ಥೆ : ಬರ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು. ನಾಲ್ಕು ವಾರಗಳಿಗೂ ಕಡಿಮೆ ಮೇವು ಲಭ್ಯವಿದ್ದಲ್ಲಿ ಮೇವು ಬ್ಯಾಂಕ್ ಸ್ಥಾಪಿಸಲು ಹಾಗೂ ಎರಡು ವಾರಗಳಿಗಿಂತ ಕಡಿಮೆ ಅವಧಿಗೆ ಮೇವು ಲಭ್ಯವಿದ್ದಲ್ಲಿ ಗೋಶಾಲೆ ಆರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಮೇವು ಬೀಜ ವಿತರಿಸಬೇಕು. ಗ್ರಾಮಗಳಲ್ಲಿರುವ ನೀರಿನ ತೊಟ್ಟಿಗಳನ್ನು ಸಮರ್ಪಕವಾಗಿ ನಿರ್ವಹಿಸುವುದರ ಜತೆಗೆ ಅಗತ್ಯವಿರುವ ಸಮರ್ಪಕವಾಗಿ ನೀರು ಪೂರೈಕೆ ಮಾಡಬೇಕು ಎಂದು ಸೂಚಿಸಿದರು.



ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ 19 ಗ್ರಾಮ ಪಂಚಾಯಿತಿಗಳನ್ನು ಸಮಸ್ಯಾತ್ಮಕ ಗ್ರಾಮ ಪಂಚಾಯಿತಿಗಳೆಂದು ಗುರುತಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಬರ ಮುಂದುವರಿದರೆ ನೀರಿನ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆಯಿದ್ದು, ಅದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಆರ್‌ಒ ಘಟಕಗಳ ದುರಸ್ತಿಗೆ ಸೂಚನೆ : ಜಿಲ್ಲೆಯಲ್ಲಿ ದುರಸ್ತಿಗೆ ಬಾಕಿ ಇರುವ ಆರ್‌ಒ ಘಟಕಗಳನ್ನು ಶೀಘ್ರ ಸರಿಪಡಿಸಬೇಕು. ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದ ಏಜೆನ್ಸಿಗಳಿಗೆ ನೋಟಿಸ್ ನೀಡಲಾಗಿದ್ದು, ಬಾಕಿ ದುರಸ್ತಿ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗರಿಮಾ ಪನ್ವಾರ್ ತಿಳಿಸಿದರು.

ಮೇವು ವಿತರಣೆ ಶೇ.100ರಷ್ಟು ಅನುಷ್ಠಾನವಾಗಲಿ : ಕೆಎಂಎಫ್ ಯೋಜನೆಯಡಿ 370 ಸಂಘಗಳು ಅಥವಾ ಹಾಲು ಉತ್ಪಾದಕರಿಗೆ ಮೇವು ಬೀಜ ವಿತರಿಸಿರುವುದಾಗಿ ದಾಖಲಾಗಿದೆ. ಈ ಯೋಜನೆ ಕೇವಲ ದಾಖಲೆಗಳಿಗೆ ಸೀಮಿತವಾಗದೆ ಶೇ.100ರಷ್ಟು ಅನುಷ್ಠಾನಗೊಳ್ಳಬೇಕು. ವಿತರಣೆಯಲ್ಲಿ ಲೋಪ ಕಂಡುಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ರೈತರ ಸಾಲ ವಸೂಲಾತಿಗೆ ಕಡಿವಾಣ : ಬರಗಾಲದ ಹಿನ್ನೆಲೆಯಲ್ಲಿ ರೈತರಿಗೆ ಸಾಲ ವಸೂಲಾತಿ ಹೆಸರಿನಲ್ಲಿ ನೋಟಿಸ್ ನೀಡಿ ಕಿರುಕುಳ ನೀಡುವುದು ಅಥವಾ ಬಲವಂತದ ವಸೂಲಾತಿ ನಡೆಸುವುದನ್ನು ಸಹಿಸಲಾಗುವುದಿಲ್ಲ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಅಥವಾ ವ್ಯಕ್ತಿಗಳ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಳ್ಳಲಿದೆ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದರು.

ರೈತರು ಸಾಲ ಸೌಲಭ್ಯ ಕೋರಿ ಬಂದಾಗ ಬ್ಯಾಂಕ್ ಅಧಿಕಾರಿಗಳು ಅಗತ್ಯ ನೆರವು ನೀಡಬೇಕು. ಸಾಲ ಮರುಹೊಂದಾಣಿಕೆ ಪ್ರಕ್ರಿಯೆಗೆ ಆದ್ಯತೆ ನೀಡಬೇಕು. ರೈತರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಗುಳೆ ತಪ್ಪಿಸಲು ಉದ್ಯೋಗಾವಕಾಶ ಕಲ್ಪಿಸಿ : ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ರೈತರು ಹಾಗೂ ಕೂಲಿಕಾರ್ಮಿಕರು ಕೆಲಸಕ್ಕಾಗಿ ಗುಳೆ ಹೋಗುವುದನ್ನು ತಡೆಯಬೇಕು. ವಿಬಿಜಿ ರಾಮ್ ಜಿ ಯೋಜನೆಯಡಿ ಅರ್ಹರಿಗೆ ಕೆಲಸ ಒದಗಿಸಿ, ಕಾರ್ಮಿಕರಿಗೆ ವೇತನ ಪಾವತಿಯಲ್ಲಿ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದರು.

ಕುಡಿಯುವ ನೀರು ಮತ್ತು ವೇತನಕ್ಕೆ ಸಂಬಂಧಿಸಿದ ದೂರುಗಳಿಗೆ ಮೊದಲ ಆದ್ಯತೆ ನೀಡಬೇಕು. ದೂರು ಸ್ವೀಕರಿಸಿದ 24 ಗಂಟೆಗಳೊಳಗೆ ಪರಿಹಾರ ಕಲ್ಪಿಸುವ ವ್ಯವಸ್ಥೆ ರೂಪಿಸಬೇಕು. ಕಾರ್ಮಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದರ ಜತೆಗೆ ಕ್ವಾರ್‌ಗಳಿಗೆ ಜಿಪಿಎಸ್ ಅಳವಡಿಕೆ ಸೇರಿದಂತೆ ಅಗತ್ಯ ಮೇಲ್ವಿಚಾರಣೆ ಕೈಗೊಳ್ಳಬೇಕು ಎಂದರು.

ಪ್ರತಿ 15 ದಿನಕ್ಕೊಮ್ಮೆ ಟಾಸ್ಕ್‌ಫೋರ್ಸ್ ಸಭೆ : ಬರ ನಿರ್ವಹಣೆಯ ಪ್ರಗತಿಯನ್ನು ಪರಿಶೀಲಿಸಲು ತಾಲೂಕು ಮಟ್ಟದಲ್ಲಿ ನಿಗದಿತ ದಿನಗಳಂದು ಸಭೆಗಳನ್ನು ನಡೆಸಿ, ಅಂದೇ ಸಭೆಯ ನಡೆಸಿ ವರದಿ ಸಲ್ಲಿಸಬೇಕು. ಪರಿಹಾರ ಕಾರ್ಯಗಳಲ್ಲಿ ವಿಳಂಬವಾಗದಂತೆ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ಪರಿಹಾರ ಒದಗಿಸಬೇಕು. ಜನರಿಗೆ ಮಾತ್ರವಲ್ಲದೆ ಜಾನುವಾರುಗಳಿಗೂ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಉಪವಿಭಾಗಾಧಿಕಾರಿ ವಿವೇಕಾನಂದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕ್ರೀಡೆಯಿಂದ ದೈಹಿಕ ಆರೋಗ್ಯ, ಮಾನಸಿಕ ಸದೃಢತೆ ಬೆಳೆಸುವ ಅತ್ಯುತ್ತಮ ಸಾಧನ: ಜಿ.ಹರೀಶ್



ರಾಯಚೂರು ,13– ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ಕ್ರೀಡೆ ಎನ್ನುವುದು ಕೇವಲ ಗೆಲುವು ಮತ್ತು ಸೋಲಿನ ವಿಚಾರವಲ್ಲ ಕ್ರೀಡೆ ನಮ್ಮ ದೈಹಿಕ ಆರೋಗ್ಯ, ಮಾನಸಿಕ ಸದೃಢತೆ, ಶಿಸ್ತು ಸಮಯಪಾಲನೆ, ಆತ್ಮವಿಶ್ವಾಸ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುವ ಅತ್ಯುತ್ತಮ ಸಾದನವಾಗಿದೆ ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಜಿ.ಹರೀಶ್ ಅವರು ಹೇಳಿದರು.

ಅಕ್ಟೋಬರ್ 08ರ ಗುರುವಾರ ದಂದು ರಾಯಚೂರು ಜಿಲ್ಲಾ ಪೊಲೀಸ್ ಪರೇಡ್ ಮೈದಾನದಲ್ಲಿ ಗೃಹ ರಕ್ಷಕರ ವಾರ್ಷಿಕ ವೃತ್ತಿಪರ ಹಾಗೂ ಕ್ರೀಡಾಕೂಟ–2026ರ ಜಿಲ್ಲಾ ಮಟ್ಟದ ಕ್ರೀಡಾಕೂಟ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮೈದಾನದಲ್ಲಿ ನಾವು ಗೆಲ್ಲುವುದಕ್ಕಿಂತ ಮೊದಲು, ನಮ್ಮ ಸೋಮಾರಿತನವನ್ನು ಗೆಲ್ಲಬೇಕು. ಪ್ರತಿದಿನದ ಅಭ್ಯಾಸ, ಪರಿಶ್ರಮ ಮತ್ತು ಶಿಸ್ತಿನಿಂದ ಮಾತ್ರ ಉತ್ತಮ ಕ್ರೀಡಾಪಟುವಾಗಲು ಸಾಧ್ಯ. ಕ್ರೀಡೆ ನಮಗೆ ತಂಡದ ಮನೋಭವವನ್ನು ಕಲಿಸುತ್ತದೆ. ಒಬ್ಬರ ಯಶಸ್ಸಿಗೆ ಮತ್ತೊಬ್ಬರ ಸಹಕಾರ ನೀಡುವುದು, ಎದುರಾಳಿಯನ್ನು ಗೌರವಿಸುವುದು ಮತ್ತು ಗೆಲುವನ್ನು ವಿನಯದಿಂದ ಸ್ವೀಕರಿಸುವುದು– ಇವೆಲ್ಲವೂ ಕ್ರೀಡೆಯಿಂದ ನಾವು ಕಲಿಯುವ ಜೀವನದ ಅಮೂಲ್ಯ ಪಾಠಗಳಾಗಿವೆ ಎಂದರು.

ಗೆಲುವು ಸಾದಿಸುವುದು ಮುಖ್ಯವಾದರು, ಪ್ರಾಮಾಣಿಕವಾಗಿ ಮತ್ತು ಕ್ರೀಡಾಸ್ಫೂರ್ತಿಯಿಂದ ಸ್ಪರ್ದಿಸುವುದು ಇನ್ನೂ ಮುಖ್ಯ. ನಮ್ಮ ಯುವಜನತೆ ಶಿಕ್ಷಣದ ಜೊತೆಗೆ ಕ್ರೀಡೆಗೂ ಸಮಾನ ಮಹತ್ವ ನೀಡಬೇಕು ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ಎಂಬ ಮಾತನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರತಿಯೊಬ್ಬರು ಕ್ರೀಡೆಯಲ್ಲಿ ಭಾಗವಹಿಸಬೇಕು ಎಂದರು.

ಈ ಕ್ರೀಡಾ ಸಮಾರಂಭವು ಎಲ್ಲಾ ಕ್ರೀಡಾಪಟುಗಳ ಪ್ರತಿಭೆಯನ್ನು ಹೊರತರುವುದರ ಜೊತೆಗೆ ಅವರಲ್ಲಿ ಶಿಸ್ತು ಆತ್ಮವಿಶ್ವಾಸ ಮತ್ತು ಸ್ನೇಹಭಾವವನ್ನು ಬೆಳೆಸಲಿ ಎಂದರು.

ಸದೃಢ ದೇಹ ಮತ್ತು ಸದೃಢ ಮನಸ್ಸುಯುಳ್ಳ ಗೃಹರಕ್ಷಕರಾದ ನೀವುಗಳು ಸದಾ ಆರೋಗ್ಯದಿಂದಿರಲು ಗೃಹರಕ್ಷಕರು ನಿರಂತರವಾಗಿ ಸದೃಢವಾಗಿರಲು ಈ ಕ್ರೀಡಾಕೂಟಗಳು ತುಂಬ ಅವಶ್ಯಕವಾಗಿದೆ. ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಿ ಜೀವ ಉಳಿಸಿ, ದೇಹದ ವಿವಿಧ ಅಂಗಗಳನ್ನು ದಾನ ಮಾಡುವುದು ಶ್ರೇಷ್ಠವಾದ ಕಾರ್ಯವಾಗಿದ್ದು, ಅಲ್ಲದೆ ಮಾನವರಾದ ನಾವುಗಳು ಇತರೆ ಮಾನವರಿಗೆ ದಾನ ಮಾಡುವುದು ಆದ್ಯ ಕರ್ತವ್ಯವಾಗಿದೆ. ಅ ನಿಟ್ಟಿನಲ್ಲಿ ಗೃಹರಕ್ಷಕರು ಪ್ರತಿಯೊಂದು ಕ್ರೀಢೆಗಳಲ್ಲಿ ಭಾಗವಹಿಸಿ ಉತ್ತಮವಾದ ಆರೋಗ್ಯವನ್ನು ಪಡೆದು ಸಮಾಜ ಸೇವೆಯನ್ನು ಮಾಡಿರಿ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಗೃಹರಕ್ಷಕದಳ ಸಮಾದೇಷ್ಟರಾದ ದೀಪಾ ಗೋಡೆಪಾಡ್ ಎಸ್.ಎ ಅವರು ವಿಜೇತರಾದ ಗೃಹರಕ್ಷಕರಿಗೆ ಬಹುಮಾನಗಳನ್ನು ವಿತರಿಸಿ, ಮಾತನಾಡಿ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮವಾದ ಜೀವನವನ್ನು ಕಟ್ಟಿಕೊಳ್ಳಲು ಉತ್ತಮವಾದ ಅಲೋಚನೆ, ಶ್ರಮದಿಂದ ಮಾತ್ರ ಸಾಧ್ಯ. ಜಿಲ್ಲಾ ಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರು ಮುಂದಿನ ಸ್ಪರ್ಧೆಗಳಲ್ಲಿ ಭಾಗವಹಿಸಿ, ಜಿಲ್ಲೆಗೆ ಕೀರ್ತಿ ತರಲು ಗೃಹಕ್ಷಕರಿಗೆ ಶುಭ ಹಾರೈಸಿದರು.

ವಿವಿಧ ಕ್ರೀಡೆ ಆಯೋಜನೆ: ರಾಯಚೂರು ನಗರದ ಜಿಲ್ಲಾ ಪೊಲಿಸ್ ಪರೇಡ್ ಮೈದಾನದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪುರುಷ ಮತ್ತು ಮಹಿಳಾ ವಿಭಾಗಗಳಿಗೆ ಸ್ಕಾ ಡ್ರಿಲ್, ಪ್ರಥಮ ಚಿಕತ್ಸೆ, ವಾಲಿಬಾಲ್, ಕಬಡ್ಡಿ, ರೈಫಲ್ ಡ್ರೀಲ್, ಹೈ–ಜಂಪ್, ಲಾಂಗ್ ಜಂಪ್, ಗುಂಡು ಎಸೆತ, ಹಗ್ಗ ಜಗ್ಗಾಟ, 100 ಮೀಟರ್ ಓಟ್, 800 ಮೀಟರ್ ಓಟ್, ಹಾಗೂ 4*100 ಮೀಟರ್ ರಿಲೆ ಹಾಗೂ ಇನ್ನಿತರ ಕ್ರೀಡೆಗಳ ನಡೆಸಲಾಯಿತು.

ಇಲಾಖೆಯ ಸಿಬ್ಬಂದಿಗಳು ಆಸಕ್ತಿಯಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಹಾಯಕ ಭೋದಕರು ಬಸವರಾಜ ಶಿದ್ರಾಹುತಾರ್, ಗೃಹರಕ್ಷಕ ಅಧಿಕಾರಿಗಳಾದ, ನಿಂಬನಗೌಡ, ತಿಮ್ಮನಗೌಡ, ವರದರಾಜ. ಕೆ, ಚನ್ನಪ್ಪಗೌಡ, ವೀರಭದ್ರಪ್ಪ, ಮಲ್ಲಪ್ಪ, ಎನ್.ಸಿ.ಓ ಬಸವಂತ ಸಿಂಗ್, ಶ್ರೀ ಎನ್. ತಿಮ್ಮಪ್ಪ, ಶಿವಪ್ಪ, ಎಂ.ಚಂದ್ರಶೇಖರ್, ಶಾಂತಪ್ಪ, ವಾಹನ ಚಾಲಕ ಮಂಜುನಾಥ ದೇಸಾಯಿ ಸೇರಿದಂತೆ ವಿವಿಧ ತಾಲ್ಲೂಕು ಘಟಕಗಳ ಗೃಹರಕ್ಷಕರು–ಗೃಹರಕ್ಷಕಿಯರು ಇದ್ದರು.

## ಶಿಲ್ಪಾ ಫೌಂಡೇಶನ ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 9.19 ಲಕ್ಷ ರೂ. ಪ್ರಯೋಗಾಲಯ ಉಪಕರಣಗಳ ಕೊಡುಗೆ



ರಾಯಚೂರು ,13– ರಾಯಚೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಪ್ರಾಯೋಗಿಕ ಜ್ಞಾನವನ್ನು ವೃದ್ಧಿಸುವ ಉದ್ದೇಶದಿಂದ ಶಿಲ್ಪಾ ಫೌಂಡೇಶನ ವತಿಯಿಂದ ಶಿಲ್ಪಾ ಮೆಡಿಕೇರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ವಿಷ್ಣುಕಾಂತ್ ಭೂತಡಾ ಅವರು 9,19,616 ಮೌಲ್ಯದ ಪ್ರಯೋಗಾಲಯ ಉಪಕರಣಗಳನ್ನು ಅಕ್ಟೋಬರ್ 12ರ ಸೋಮವಾರ ದಂದು ಕೊಡುಗೆಯಾಗಿ ನೀಡಿದರು.

ಈ ವೇಳೆ ವಿಷ್ಣುಕಾಂತ್ ಶಿಲ್ಪಾ ಮೆಡಿಕೇರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ವಿಷ್ಣುಕಾಂತ್ ಭೂ ಅವರು ಮಾತನಾಡಿ, ಶಿಕ್ಷಣದ ಮಹತ್ವ, ಜ್ಞಾನದ ಸದ್ಬಳಕೆ ಹಾಗೂ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಸಮಾಜದ ಒಳಿತಿಗಾಗಿ ಬಳಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಉದ್ಯಮಿಗಳು ಕೈಜೋಡಿಸಿದಾಗ ಗುಣಮಟ್ಟದ ಶಿಕ್ಷಣದ ದೊರೆಯುತ್ತದ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಯಂಕಣ್ಣ ವಹಿಸಿ, ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಪ್ರಯೋಗಾಲಯ ಸೌಲಭ್ಯಗಳೂ ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಶ್ರೀ ವಿಷ್ಣುಕಾಂತ್ ಭೂತಡಾ ಅವರ ಕೊಡುಗೆ ಕಾಲೇಜಿನ ವಿಜ್ಞಾನ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆಯನ್ನು ಬಲಪಡಿಸುವುದರ ಜೊತೆಗೆ ಸಮಾಜಮುಖಿ ಉದ್ಯಮಶೀಲತೆಗೆ ಸ್ಫೂರ್ತಿದಾಯಕ ಉದಾಹರಣೆಯಾಗಿದೆ ಎಂದರು.



ಇದೇ ಸಂದರ್ಭದಲ್ಲಿ ಐಕ್ಯೂಎಸಿ ಸಂಯೋಜಕ ಡಾ. ಮಹಾಂತೇಶ ಅಂಗಡಿ, ವಿಜ್ಞಾನ ವಿಭಾಗದ ಡೀನ್ ಡಾ. ಸೋಮನಾಥ ರೆಡ್ಡಿ ಸಿ.ಪಾಟೀಲ್ ಹಾಗೂ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ವಿಜಯಶ್ರೀ ಪಾಟೀಲ್ ಉಪಸ್ಥಿತರಿದ್ದರು.

ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ.ರಾಘವೇಂದ್ರ ನಾಯಕ್ ಕಾರ್ಯಕ್ರಮ ನಿರೂಪಿಸಿದರು. ಬಿ.ಎಸ್‌ಸಿ. ಐದನೇ ಸೆಮಿಸ್ಟರ್ ವಿದ್ಯಾರ್ಥಿನಿ ಸಿಂಧು ಹಲ್ಲೋರ್ ಪ್ರಾರ್ಥನಾ ಗೀತೆ ಹಾಡಿದರು. ರಸಾಯನಶಾಸ್ತ್ರ ವಿಭಾಗದ ಡಾ.ಹನುಮೇಶ ಸ್ವಾಗತಿಸಿದರು. ರಾಜಕೀಯ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಶಿವರಾಜ್ ಕೊಪ್ಪರ ಅತಿಥಿಗಳನ್ನು ಪರಿಚಯಿಸಿದರು. ಕಂಪ್ಯೂಟರ್ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಡಾ. ರವಿ ಎಂ. ವಂದಿಸಿದರು.

## ಪಾಕಿಸ್ತಾನದಲ್ಲಿ ನೀರಿಗಾಗಿ ಹಾಹಾಕಾರ; ಭಾರತ ಸಿಂಧೂ ಜಲ ಒಪ್ಪಂದ ರದ್ದುಗೊಳಿಸಿದ ಬೆನ್ನಲ್ಲೇ ಪಾಕ್‌ನಲ್ಲಿ ಶೇ. 22ರಷ್ಟು ನೀರಿನ ಕೊರತೆ



ಇಸ್ಲಾಮಾಬಾದ್, 13– 2025ರ ಏಪ್ರಿಲ್‌ನಲ್ಲಿ ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತವು 'ಸಿಂಧೂ ಜಲ ಒಪ್ಪಂದ'ವನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ, ಮುಂಬರುವ 2026–27ರ ಖಾರಿಫ್ ಕೃಷಿ ಹಂಗಾಮಿನಲ್ಲಿ ಸಿಂಧೂ ನದಿ ಪಾತ್ರಕ್ಕೆ ಹರಿದುಬರುವ ನೀರಿನ ಪ್ರಮಾಣದಲ್ಲಿ ಶೇ. 22ರಷ್ಟು ತೀವ್ರ ಅಭಾವ ಉಂಟಾಗಲಿದೆ ಎಂದು ಪಾಕಿಸ್ತಾನ ಸರ್ಕಾರ ಅಧಿಕೃತವಾಗಿ ಅಂದಾಜಿಸಿದೆ. ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳೆರಡಕ್ಕೂ ಒಟ್ಟಾರೆಯಾಗಿ ಶೇ. 22ರಷ್ಟು ನೀರಿನ ಕೊರತೆಯಾಗಲಿದೆ. ಕಳೆದ ಖಾರಿಫ್ ಹಂಗಾಮಿನಲ್ಲೂ ಪಾಕಿಸ್ತಾನವು ಶೇ. 22ರಷ್ಟು ನೀರಿನ ಹರಿವಿನ ಇಳಿತವನ್ನು ಎದುರಿಸಿತ್ತು ಎನ್ನಲಾಗಿದೆ.

ಈ ಬಗ್ಗೆ ಸಿಎನ್‌ಎನ್–ನ್ಯೂಸ್18 ವರದಿ ಮಾಡಿದ್ದು, ಪಾಕಿಸ್ತಾನದ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹವು ಗಣನೀಯವಾಗಿ ಕುಸಿದಿದ್ದು, ಕೇವಲ 90 ದಿನಗಳಿಗೆ ಮಾತ್ರ ಆಗುವಷ್ಟು ನೀರು ಉಳಿದಿದೆ ಎಂದು ಪಾಕಿಸ್ತಾನ ಸರ್ಕಾರದ ವರದಿಗಳು ಎಚ್ಚರಿಸಿವೆ.ಪಾಕಿಸ್ತಾನವು ಪ್ರಸ್ತುತ ಅತ್ಯಂತ ಭೀಕರವಾದ ನೀರಿನ ಬಿಕ್ಕಟ್ಟು ಎದುರಿಸುತ್ತಿದ್ದು, ಇದು ದೇಶದ ಕೃಷಿ ಕ್ಷೇತ್ರ, ಆಹಾರ ಭದ್ರತೆ ಹಾಗೂ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಶೇ. 22ರಿಂದ 25ರಷ್ಟು ನೀರಿನ ಕೊರತೆ ಎದುರಾಗಿದ್ದು, ಮುಂಬರುವ ರಬಿ ಹಾಗೂ ಖಾರಿಫ್ ಕೃಷಿ ಹಂಗಾಮಿನಲ್ಲಿ ಪಾಕ್ ತೀವ್ರ ನೀರಿನ ಕೊರತೆಯನ್ನು ಎದುರಿಸಲಿದೆ. ಇದು ಗೋಧಿ ಹಾಗೂ ಇತರ ಪ್ರಮುಖ ಬೆಳೆಗಳ ಉತ್ಪಾದನೆಗೆ ಭಾರಿ ಹೊಡೆತ ನೀಡಲಿದೆ. ಪಾಕಿಸ್ತಾನದಲ್ಲಿ ಜನಸಂಖ್ಯೆ ತೀವ್ರವಾಗಿ ಹೆಚ್ಚುತ್ತ ಇರುವಂತೆಯೇ, ತಲಾವಾರು ನೀರಿನ ಲಭ್ಯತೆಯು 1951ರಲ್ಲಿ 5,260 ಕ್ಯೂಬಿಕ್ ಮೀಟರ್ ಇದ್ದದ್ದು, ಪ್ರಸ್ತುತ 899 ಕ್ಯೂಬಿಕ್ ಮೀಟರ್‌ಗೆ ಕುಸಿದಿದೆ. ಇದು ವಿಶ್ವ ಆರೋಗ್ಯ ಸಂಸ್ಥೆಯ ನೀರಿನ ಅಭಾವದ ಮಿತಿಗಿಂತಲೂ ಕಡಿಮೆಯಾಗಿದೆ.

ಸಿಂಧೂ ಜಲ ಒಪ್ಪಂದವನ್ನು ಭಾರತ ಸ್ಥಗಿತಗೊಳಿಸಿರುವುದನ್ನು ಜಾಗತಿಕ ವೇದಿಕೆಗಳಲ್ಲಿ ಪ್ರಶ್ನಿಸುತ್ತಿರುವ ಪಾಕಿಸ್ತಾನ, ಇದನ್ನು ಭಾರತ ತನ್ನ ವಿರುದ್ಧ ನಡೆಸುತ್ತಿರುವ 'ನೀರಿನ ಯುದ್ಧ' ಎಂದು ಕರೆದಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತ ಸರ್ಕಾರವು "ರಕ್ತ ಮತ್ತು ನೀರು ಒಟ್ಟಿಗೆ ಹರಿಯಲು ಸಾಧ್ಯವಿಲ್ಲ" ಎಂದು ಕಟ್ಟುನಿಟ್ಟಾಗಿ ಸ್ಪಷ್ಟಪಡಿಸಿದ್ದು, ಭಾರತದ ವಿರುದ್ಧದ ಗಡಿಪಾರಿನ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ಖಡಕ್ ಎಚ್ಚರಿಕೆ ನೀಡಿದೆ.

ನೀರಿನ ಬಿಕ್ಕಟ್ಟಿಗೆ ಪ್ರಮುಖ ಕಾರಣಗಳು:ಭಾರತ ಮತ್ತು ಪಾಕಿಸ್ತಾನದ ನಡುವಿನ ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದ ಕಾನೂನು ಹಾಗೂ ರಾಜತಾಂತ್ರಿಕ ಬೆಳವಣಿಗೆಗಳು, ಹಾಗೂ ನದಿ ನೀರಿನ ಹರಿವಿನಲ್ಲಿ ಉಂಟಾಗಿರುವ ವ್ಯತ್ಯಯಗಳು ನೀರಿನ ಲಭ್ಯತೆಯ ಮೇಲೆ ಪರಿಣಾಮ ಬೀರಿದೆ. ಜಲಾಶಯಗಳ ವಿಸ್ತರಣೆ ಮತ್ತು ನಿರ್ವಹಣೆಯಲ್ಲಿನ ವಿಳಂಬಗಳು ಕೂಡ ಸಮಸ್ಯೆಯನ್ನು ಉಲ್ಬಣಗೊಳಿಸಿವೆ.

ನೀರಿನ ಸಂಪನ್ಮೂಲಗಳ ದುರ್ಬಳಕೆ, ಹಳೆಯದಾದ ಮತ್ತು ಸೋರುವ ನೀರು ಸರಬರಾಜು ಪೈಪ್‌ಲೈನ್‌ಗಳು, ಕಾಲುವೆಗಳ ನಿರ್ವಹಣೆಯ ಕೊರತೆ ಹಾಗೂ ಅಂತರ್ಜಲದ ವಿಪರೀತ ಬಳಕೆ ಬಿಕ್ಕಟ್ಟನ್ನು ತೀವ್ರಗೊಳಿಸಿದೆ. ಅನಿಯಮಿತ ಮಳೆ, ಹಿಮಾಲಯನ್ ಹಿಮನದಿಗಳು ಕರಗುವಿಕೆಯಲ್ಲಿ ವ್ಯತ್ಯಯ ಹಾಗೂ ತೀವ್ರ ಉಷ್ಣಾಂಶ ಏರಿಕೆಯಿಂದಾಗಿ ನದಿಗಳಿಗೆ ಬರುವ ನೀರಿನ ಪ್ರಮಾಣದಲ್ಲಿ ಏರಿಳಿತ ಉಂಟಾಗಿದೆ.

ಪಾಕಿಸ್ತಾನದ ಆಹಾರ ಭದ್ರತೆಯ ಬೆನ್ನೆಲುಬಾಗಿರುವ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳು ನೀರಿನ ಕೊರತೆಯ ನೇರ ಪರಿಣಾಮ ಎದುರಿಸುತ್ತಿವೆ. ಕೃಷಿಗೆ ನೀರಿಲ್ಲದೆ ರೈತರು ಸಂಕಷ್ಟದಲ್ಲಿದ್ದಾರೆ. ಹೈದರಾಬಾದ್, ಕರಾಚಿ ಸೇರಿದಂತೆ ಪ್ರಮುಖ ನಗರಗಳಲ್ಲಿ ಕಲುಷಿತ ನೀರು ಸರಬರಾಜು ಮತ್ತು ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದ್ದು, ನಾಗರಿಕರು ಟ್ಯಾಂಕರ್‌ಗಳನ್ನು ಅವಲಂಬಿಸುವಂತಾಗಿದೆ. ಈ ನೀರಿನ ಬಿಕ್ಕಟ್ಟು ಪಾಕಿಸ್ತಾನದಲ್ಲಿ ಮುಂಬರುವ ದಿನಗಳಲ್ಲಿ ಕೇವಲ ಆರ್ಥಿಕ ಅಥವಾ ಕೃಷಿ ಸಮಸ್ಯೆಯಷ್ಟೇ ಅಲ್ಲದೆ, ರಾಷ್ಟ್ರೀಯ ಭದ್ರತೆ ಹಾಗೂ ಸಾಮಾಜಿಕ ಅಶಾಂತಿಗೆ ಕಾರಣವಾಗಬಹುದು ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನದ ಜಲ ಮಂಡಳಿ ಮತ್ತು ಕಂದಾಯ ದಾಖಲೆಗಳ ಪ್ರಕಾರ, ಸಿಂಧೂ ನದಿ ವ್ಯವಸ್ಥೆಯ ಪ್ರಮುಖ ಜೀವನಾಡಿಗಳಾದ ಜೀಲಂ ಮತ್ತು ಚೀನಾಬ್ ನದಿಗಳಲ್ಲಿ ನೀರಿನ ಹರಿವು ತೀವ್ರವಾಗಿ ಕುಸಿದಿದೆ.

ಭಾರತದಿಂದ ಚೀನಾಬ್ ನದಿಗೆ ಹರಿದುಬರುವ ನೀರಿನ ಪ್ರಮಾಣ ಕಡಿಮೆಯಾಗಿರುವುದು ಕೃತಕ ಬಿಕ್ಕಟ್ಟು ಸೃಷ್ಟಿಸಿದೆ ಎಂದು ಪಾಕಿಸ್ತಾನಿ ಅಧಿಕಾರಿಗಳು ಆರೋಪಿಸಿದ್ದಾರೆ.

ಪಾಕಿಸ್ತಾನದ ಒಟ್ಟು ಕೃಷಿ ಉತ್ಪಾದನೆಯ ಶೇ. 90ರಷ್ಟು ಭಾಗವು ಸಿಂಧೂ ನದಿ ಪಾತ್ರದ ನೀರಾವರಿ ವ್ಯವಸ್ಥೆಯನ್ನೇ ಅವಲಂಬಿಸಿದೆ. ದೇಶದ ಪ್ರಮುಖ ಕೃಷಿ ಪ್ರಾಂತ್ಯಗಳಾದ ಪಂಜಾಬ್ ಮತ್ತು ಸಿಂಧ್ ನೀರಿಲ್ಲದೆ ಪರದಾಡುತ್ತಿದ್ದು, ಈ ನೀರಿನ ಅಭಾವವು ಪಾಕಿಸ್ತಾನದ ಆಹಾರ ಭದ್ರತೆ ಮತ್ತು ಆರ್ಥಿಕತೆಯ ಮೇಲೆ ಅತ್ಯಂತ ಗಂಭೀರ ಪರಿಣಾಮ ಬೀರಲಿದೆ.

## ಕೊಂಕಣ ರೈಲ್ವೆ ಸೇರಿ ರಾಜ್ಯದ ರೈಲು ಮಾರ್ಗ ಅಭಿವೃದ್ಧಿಗೆ 9,000 ಕೋಟಿ ರೂ. ಅನುದಾನ ಮಂಜೂರು!





ಶಿವಮೊಗ್ಗ,13– ರಾಜ್ಯದ ರೈಲ್ವೆ ಕ್ಷೇತ್ರದ ಸಮಗ್ರ ವಿಕಾಸ ಹಾಗೂ ಕರಾವಳಿ–ಮಲೆನಾಡು ಭಾಗದ ಸಂಪರ್ಕವನ್ನು ಮತ್ತಷ್ಟು ಕವಲುಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಐತಿಹಾಸಿಕ ನಿರ್ಧಾರ ಕೈಗೊಂಡಿದೆ. ಕೊಂಕಣ ರೈಲ್ವೆಯ ಮುಂದುವರಿದ ಅಭಿವೃದ್ಧಿ ಕಾಮಗಾರಿಗಳು ಹಾಗೂ ರಾಜ್ಯದ ಇತರ ರೈಲ್ವೆ ಯೋಜನೆಗಳ ಪ್ರಗತಿಗಾಗಿ ಬರೋಬ್ಬರಿ 9,000 ಕೋಟಿ ರೂಪಾಯಿ ಅನುದಾನವನ್ನು ಮಂಜೂರು ಮಾಡಲಾಗಿದೆ ಎಂದು ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.ಕೊಂಕಣ ರೈಲ್ವೆ ಹಾಗೂ ಕರ್ನಾಟಕದ ವಿವಿಧ ರೈಲ್ವೆ ಯೋಜನೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬರೋಬ್ಬರಿ 9,000 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ ಎಂದು ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ಮಾರ್ಗದ ಹಳೆಯ ಟೆಂಡರ್ ರದ್ದುಗೊಳಿಸಿ ಹೊಸ ಟೆಂಡರ್ ಕರೆಯಲಾಗುವುದು ಎಂದು ಅವರು ಪ್ರಮುಖ ಘೋಷಣೆ ಮಾಡಿದ್ದಾರೆ.

ಮೂಲಸೌಕರ್ಯ ವೃದ್ಧಿಗೆ ಹೆಚ್ಚಿನ ಆದ್ಯತೆ ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸೋಮಣ್ಣ, ರಾಜ್ಯದಲ್ಲಿ ಪ್ರಸ್ತುತ ಸುಮಾರು 52,000 ಕೋಟಿ ರೂ. ವೆಚ್ಚದಲ್ಲಿ ವಿವಿಧ ರೈಲ್ವೆ ಅಭಿವೃದ್ಧಿ ಕಾಮಗಾರಿಗಳು ಚಾಲ್ತಿಯಲ್ಲಿವೆ ಎಂದು ಮಾಹಿತಿ ನೀಡಿದರು. ಮಲೆನಾಡು ಹಾಗೂ ಕರಾವಳಿ ಭಾಗದ ರೈಲು ಪ್ರಯಾಣಿಕರ ಬಹುಕಾಲದ ಬೇಡಿಕೆಗಳಿಗೆ ಸ್ಪಂದಿಸಿರುವ ಕೇಂದ್ರ ಸರ್ಕಾರ, ಮೂಲಸೌಕರ್ಯ ವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ. ದಶಕಗಳಿಂದ ನನೆಗುದಿಗೆ ಬಿದ್ದಿರುವ ಮತ್ತು ಪ್ರಗತಿಯಲ್ಲಿರುವ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸ್ಪಷ್ಟ ರೂಪುರೇಷೆ ಸಿದ್ಧಪಡಿಸಲಾಗಿದೆ ಎಂದರು.

ಮುಂಬರುವ ಎರಡು ತಿಂಗಳ ಒಳಗಾಗಿ ಹೊಸದಾಗಿ ಟೆಂಡರ್ ಇದೇ ವೇಳೆ, ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಪ್ರಮುಖ ಘೋಷಣೆ ಮಾಡಿರುವ ಸಚಿವರು, ಈ ಹಿಂದಿನ ಗುತ್ತಿಗೆದಾರರ ಲೋಪ ಹಾಗೂ ವಿಳಂಬ ಧೋರಣೆಯಿಂದಾಗಿ ಹಳೆಯ ಟೆಂಡರ್ ಅನ್ನು ರದ್ದುಪಡಿಸಿ ಕಪ್ಪುಪಟ್ಟಿಗೆ ಸೇರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಮುಂಬರುವ ಎರಡು ತಿಂಗಳ ಒಳಗಾಗಿ ಹೊಸದಾಗಿ ಟೆಂಡರ್ ಕರೆಯಲಾಗುವುದು ಹಾಗೂ ಕಾಮಗಾರಿಗಳಿಗೆ ವೇಗ ನೀಡಲಾಗುವುದು ಎಂದು ಭರವಸೆ ನೀಡಿದರು.

ಶೃಂಗೇರಿ ಮಾರ್ಗದ ಹೊಸ ರೈಲು ಪ್ರಸ್ತಾವನೆಗಳ ಕುರಿತು ಚರ್ಚೆ ಜೊತೆಗೆ, ಶಿವಮೊಗ್ಗ–ಬೀರೂರು ಮಾರ್ಗದ ದ್ವಿಗುಣೀಕರಣ ಕಾರ್ಯವು ಪ್ರಸ್ತುತ ಸರ್ವೆ ಹಂತದಲ್ಲಿದೆ. ಇದರೊಂದಿಗೆ ಮಹತ್ವಾಕಾಂಕ್ಷೆಯ ತಾಳಗುಪ್ಪ–ಹೊನ್ನಾವರ ಹೊಸ ರೈಲು ಮಾರ್ಗ ನಿರ್ಮಾಣಕ್ಕೆ ಈಗಾಗಲೇ 1,511 ಕೋಟಿ ರೂ. ಅಂದಾಜು ವೆಚ್ಚ ನಿಗದಪಡಿಸಲಾಗಿದೆ. ಮಂಗಳೂರು, ಉಡುಪಿ ಹಾಗೂ ಶಿವಮೊಗ್ಗ ಭಾಗದ ರೈಲು ಸಂಪರ್ಕ ಜಾಲವನ್ನು ವಿಸ್ತರಿಸಲು ಹಾಗೂ ಶೃಂಗೇರಿ ಮಾರ್ಗದ ಹೊಸ ರೈಲು ಪ್ರಸ್ತಾವನೆಗಳ ಕುರಿತು ಚರ್ಚೆ ನಡೆದಿದ್ದು, ಮುಂದಿನ ದಿನಗಳಲ್ಲಿ ಕರಾವಳಿ ಮತ್ತು ಮಲೆನಾಡಿನ ರೈಲ್ವೆ ಮುಖಚಿತ್ರ ಸಂಪೂರ್ಣ ಬದಲಾಗಲಿದೆ ಎಂದು ವಿ. ಸೋಮಣ್ಣ ವಿಶ್ವಾಸ ವ್ಯಕ್ತಪಡಿಸಿದರು.

## ಹುನಗುಂದದಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ: ರಾಯಚೂರು–ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಬಂದ್

ಬಾಗಲಕೊಟೆ, 13– ಬಾಗಲಕೋಟೆ ಜಿಲ್ಲೆಯ ಹುನಗುಂದ ಪಟ್ಟಣದಲ್ಲಿ ಕಬ್ಬು ಬೆಳೆಗಾರರು ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸುತ್ತಿದ್ದಾರೆ. ರೈತರು ರಾಯಚೂರು–ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯನ್ನು ತಡೆದು ಆಕ್ರೋಶವನ್ನು ಹೊರಹಾಕಿದ್ದಾರೆ. ಈ ಪ್ರತಿಭಟನೆಯಿಂದಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿದೆ. ಸಾಲು ಸಾಲಾಗಿ ವಾಹನಗಳು ನಿಂತಿರುವುದು ಕಂಡುಬಂದಿದ್ದು, ಪ್ರಯಾಣಿಕರಿಗೆ ತೊಂದರೆಯಾಗಿದೆ. ಕಬ್ಬು ಬೆಳೆಗಾರರು ಹಲವು ದಿನಗಳಿಂದ ಬಾಕಿ ಇರುವ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಕಬ್ಬಿನ ಬೆಲೆ ನಿಗದಿ, ಬಾಕಿ ಪಾವತಿ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಅವರು ಆಗ್ರಹಿಸುತ್ತಿದ್ದಾರೆ.ರೈತರ ಬೇಡಿಕೆಗಳ ಸಂಬಂಧ ನವದೆಹಲಿಯಲ್ಲಿ ಸೋಮವಾರ ರೈತರ ಜತೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಪ್ರಲ್ಹಾದ್ ಜೋಶಿ ಸಭೆ ನಡೆಸಿದ್ದರು. ಅದು ವಿಫಲವಾಗಿತ್ತು. ಇದರ ಬೆನ್ನಲ್ಲೇ ರೈತರು ಮತ್ತೆ ಬೀದಿಗಿಳಿದಿದ್ದಾರೆ.

## ಕೆಪಿಎಸ್‌ಸಿ ಹಗರಣ: ಮೆರಿಟ್ ಲಿಸ್ಟ್ ದುರುಪಯೋಗ, ಲಕ್ಷಾಂತರ ರೂ. ವಸೂಲಿ ಮಾಡ್ತಿದ್ದ ಆರೋಪಿಗಳು

ಬೆಂಗಳೂರು, 13–ಕೆಪಿಎಸ್‌ಸಿ ನೇಮಕಾತಿ ಹಗರಣದ ಇ.ಡಿ ತನಿಖೆಯಲ್ಲಿ ಮತ್ತೊಂದು ಅಕ್ರಮದ ಮಾಹಿತಿ ಬಹಿರಂಗವಾಗಿದೆ. ಅಭ್ಯರ್ಥಿಗಳ ಮೆರಿಟ್ ಲಿಸ್ಟ್‌ನಲ್ಲಿರುವ ಅಂಕಗಳು ಮತ್ತು ಅಂತಿಮ ಆಯ್ಕೆಯ ಸಾಧ್ಯತೆಯ ಮಾಹಿತಿಯನ್ನು ದುರುಪಯೋಗಪಡಿಸಿಕೊಂಡು, ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಹಣ ವಸೂಲಿ ಮಾಡಲಾಗುತ್ತಿತ್ತು ಎಂಬ ವಿಚಾರ ಬಯಲಾಗಿದೆ. ಐಎಎಸ್ ಅಧಿಕಾರಿ ಜ್ಞಾನೇಂದ್ರ ವಿಚಾರಣೆ ವೇಳೆ ಈ ರೀತಿಯ ಅಕ್ರಮದ ಬಗ್ಗೆ ಮಾಹಿತಿ ಬಹಿರಂಗವಾಗಿದೆ. ಜ್ಞಾನೇಂದ್ರ ಮಾತ್ರವಲ್ಲದೆ, ಇತರ ಅಧಿಕಾರಿಗಳು ಮತ್ತು ಕೆಪಿಎಸ್‌ಸಿಯ ಕೆಲವು ಸದಸ್ಯರೂ ಈ ರೀತಿಯ ಅಕ್ರಮದಲ್ಲಿ ಶಾಮೀಲಾಗಿದ್ದರು ಎಂಬ ಆರೋಪವೂ ಇದೆ.

ಮೆರಿಟ್ ಲಿಸ್ಟ್ ಮಾಹಿತಿ ಬಳಸಿ ಹಣ ವಸೂಲಿ ಪರೀಕ್ಷೆ ಮುಗಿದ ಬಳಿಕ 1:3 ಅನುಪಾತದಲ್ಲಿ ಮೆರಿಟ್ ಲಿಸ್ಟ್ ಬಿಡುಗಡೆ ಮಾಡಲಾಗಿತ್ತು. ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಅಂಕಗಳ ಮಾಹಿತಿಯನ್ನು ಗೌಪ್ಯವಾಗಿಡಬೇಕಿತ್ತು. ಆದರೆ, ಮೆರಿಟ್ ಲಿಸ್ಟ್‌ನಲ್ಲಿರುವ ಅಂಕಗಳು ಹಾಗೂ ಅಭ್ಯರ್ಥಿಗಳ ಅಂತಿಮ ಆಯ್ಕೆಯ ಸಾಧ್ಯತೆಯ ಮಾಹಿತಿಯನ್ನು ಕೆಲವರು ದುರುಪಯೋಗಪಡಿಸಿಕೊಂಡಿದ್ದರು. ಕೆಪಿಎಸ್‌ಸಿಯಲ್ಲಿ ಪರೀಕ್ಷಾ ನಿಯಂತ್ರಕರಾಗಿದ್ದ ಜ್ಞಾನೇಂದ್ರ ಅವರನ್ನು ಕೆಲವು ಸದಸ್ಯರು ಮತ್ತು ಅಧಿಕಾರಿಗಳು ಸಂಪರ್ಕಿಸಿ, ಮೆರಿಟ್ ಲಿಸ್ಟ್‌ನಲ್ಲಿ ಯಾವ ಅಭ್ಯರ್ಥಿಗೆ ಎಷ್ಟು ಅಂಕಗಳಿವೆ ಹಾಗೂ ಯಾರಿಗೆ ಅಂತಿಮ ಆಯ್ಕೆಯಾಗುವ ಸಾಧ್ಯತೆಯಿದೆ ಎಂಬ ಮಾಹಿತಿ ಪಡೆಯುತ್ತಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ.ಸ್ವಂತ ಸಾಮರ್ಥ್ಯದಿಂದ ಆಯ್ಕೆಯಾಗಬಲ್ಲ ಅಭ್ಯರ್ಥಿಗಳಿಗೂ ವಂಚನೆಯ ಬಲೆ

ಕೆಲವು ಅಭ್ಯರ್ಥಿಗಳು ತಮ್ಮ ಸ್ವಂತ ಸಾಮರ್ಥ್ಯದಿಂದಲೇ ಅಂತಿಮ ಆಯ್ಕೆಯಾಗುವ ಸಾಧ್ಯತೆಯಿದ್ದರೂ, ಅವರಿಗೆ ಕೆಲಸ ಕೊಡಿಸುವುದಾಗಿ ಭರವಸೆ ನೀಡಲಾಗುತ್ತಿತ್ತು. 'ನಮ್ಮ ಪ್ರಯತ್ನದಿಂದಲೇ ನಿಮಗೆ ಕೆಲಸ ಸಿಗುತ್ತಿದೆ' ಎಂದು ನಂಬಿಸಿ, ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಲಂಚಕ್ಕೆ ಬೇಡಿಕೆ ಇಡಲಾಗುತ್ತಿತ್ತು ಎಂಬ ಆರೋಪವೂ ಕೇಳಿಬಂದಿದೆ.

ಅಭ್ಯರ್ಥಿಗಳಿಗೆ ಅಂತಿಮ ಆಯ್ಕೆಯ ಸಾಧ್ಯತೆ ಇರುವ ಮಾಹಿತಿ ಮೊದಲೇ ತಿಳಿದಿದ್ದರೂ, ಅದನ್ನು ತಮ್ಮ ಪ್ರಭಾವದಿಂದ ಸಾಧ್ಯವಾಗಿಸಿದೆ ಎಂದು ಹೇಳಿ ಹಣ ವಸೂಲಿ ಮಾಡಲಾಗುತ್ತಿತ್ತು. ಈ ಮೂಲಕ ಅಭ್ಯರ್ಥಿಗಳ ಆಯ್ಕೆಯ ಸಾಧ್ಯತೆಯ ಮಾಹಿತಿಯನ್ನೇ ಹಣ ಸಂಪಾದನೆಯ ಮಾರ್ಗವನ್ನಾಗಿ ಬಳಸಿಕೊಂಡಿದ್ದರು ಎಂಬ ಆರೋಪದ ಬಗ್ಗೆಯೂ ತನಿಖೆಯಲ್ಲಿ ಸುಳಿವು ದೊರೆತಿದೆ.

ಹಲವು ವಿಭಾಗಗಳ ಅಧಿಕಾರಿಗಳಿಂದಲೂ ಅಕ್ರಮ?ಮೆರಿಟ್ ಲಿಸ್ಟ್ ಅನ್ನು ಕಂಪ್ಯೂಟರ್ ವಿಭಾಗ, ಸಿ–3 ವಿಭಾಗ ಹಾಗೂ ಕೆಪಿಎಸ್‌ಸಿ ಕಾರ್ಯದರ್ಶಿಗಳ ಕಚೇರಿಗೆ ಕಳುಹಿಸಲಾಗುತ್ತಿತ್ತು. ಈ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲ ಅಧಿಕಾರಿಗಳು ಪಟ್ಟಿಯಲ್ಲಿನ ಮಾಹಿತಿಯನ್ನು ದುರುಪಯೋಗಪಡಿಸಿಕೊಂಡಿದ್ದರು ಎಂಬ ಆರೋಪದ ಬಗ್ಗೆಯೂ ತನಿಖೆಯಲ್ಲಿ ಸುಳಿವು ದೊರೆತಿದೆ.

ಅಭ್ಯರ್ಥಿಗಳ ಆಯ್ಕೆಯ ಸಾಧ್ಯತೆಯ ಬಗ್ಗೆ ಕೆಪಿಎಸ್‌ಸಿಯ ಕೆಲವು ಸದಸ್ಯರಿಗೆ ಮಾಹಿತಿ ನೀಡಲಾಗುತ್ತಿತ್ತು. ಅಲ್ಲದೆ, ಹಣ ನೀಡಿದ್ದ ಅಭ್ಯರ್ಥಿಗಳಿಗೂ ನೇರವಾಗಿ ಮಾಹಿತಿ ಹಂಚಿಕೊಳ್ಳಲಾಗುತ್ತಿತ್ತು. ನಂತರ ನೇಮಕಾತಿ ಮಾಡಿಸಿಕೊಡುವುದಾಗಿ ಭರವಸೆ ನೀಡಿ ಅವರಿಂದ ಹಣ ಪಡೆಯಲಾಗುತ್ತಿತ್ತು.

ಈ ರೀತಿಯಲ್ಲಿ ಹಣ ನೀಡಿ ವಂಚನೆಗೆ ಒಳಗಾದ ಅಭ್ಯರ್ಥಿಗಳು ಯಾರು ಎಂಬುದು ಇನ್ನೂ ಪತ್ತೆಯಾಗಿಲ್ಲ. ಕೆಪಿಎಸ್‌ಸಿ ಹಗರಣದ ತನಿಖೆಯಲ್ಲಿ ಮೆರಿಟ್ ಲಿಸ್ಟ್‌ನ ಗೌಪ್ಯ ಮಾಹಿತಿ ಹೇಗೆ ದುರುಪಯೋಗವಾಯಿತು ಮತ್ತು ಈ ಅಕ್ರಮದಲ್ಲಿ ಯಾರೆಲ್ಲ ಭಾಗಿಯಾಗಿದ್ದರು ಎಂಬುದು ಪ್ರಮುಖ ಪ್ರಶ್ನೆಗಳಾಗಿವೆ.

# ಸಂವಿಧಾನ ಒಂದು ಜಾತಿಗೆ ಸೀಮಿತವಾಗಿ ಬರೆದಿಲ್ಲ :ಮಿಲಿಂದ ಐಹೊಳೆ



ಕೊಟ್ಟೂರು, 13– "ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವಿಶ್ವಕ್ಕೆ ಮಾದರಿಯಾದ ಸಂವಿಧಾನವನ್ನು ರಚಿಸಿ ಕೊಟ್ಟಿದ್ದಾರೆ. ಈ ಸಂವಿಧಾನ ಒಂದು ಜಾತಿಗೆ ಸೀಮಿತವಾಗಿ ಬರೆದಿಲ್ಲ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ನಿಟ್ಟಿನಲ್ಲಿ ಎಲ್ಲಾ ಸಮುದಾಯಗಳು ಸಮಾನತೆ ಸಹಬಾಳ್ವೆಯಿಂದ ಪ್ರಗತಿ ಹೊಂದಲಿ ಎಂಬ ಆಶಯದಿಂದ ನಮ್ಮೆಲ್ಲರನ್ನು ಸುಧಾರಿಸಲು ಸಂವಿಧಾನದ ಬರೆದ ಮಹಾತ್ಮ ಅವರು, ಪ್ರತಿಯೊಬ್ಬರೂ ಅವರನ್ನು ಸ್ಮರಿಸುವುದು ಕರ್ತವ್ಯವಾಗಿದೆ. ಕಾರ್ಮಿಕರ ಹಕ್ಕು, ಮಹಿಳೆಯರಿಗೆ ಚುನಾವಣೆ ಹಕ್ಕು, ಭಾರತ ಆರ್ಥಿಕ ಪ್ರಗತಿ ಹೊಂದಲು ಆರ್ಥಿಕ ನೀತಿಯನ್ನು ರಚಿಸಿದ ಕೀರ್ತಿ ಅಂಬೇಡ್ಕರ್ ಗೆ ಸಲ್ಲುತ್ತದೆ ಎಂದು ಕೆಡಿಎಸ್ ರಾಜ್ಯಾಧ್ಯಕ್ಷರಾದ ಮಿಲಿಂದ ಐಹೊಳೆ ಅವರು ಮಾತನಾಡಿದರು." ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ಕುಡತಿನಮಗ್ಗಿ ಗ್ರಾಮದಲ್ಲಿ ದಲಿತ ಸಂಘರ್ಷ ಸಮಿತಿ ಭೀಮ ಧ್ವನಿ ಸಂಘಟನೆಯ ರಾಜ್ಯ ಸಮಿತಿ ಸಭೆ ಅತ್ಯಂತ ಅರ್ಥಪೂರ್ಣವಾಗಿ ಜರುಗಿ–ತು.

ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಶ್ರೀ ಮಿಲಿಂದ ಐಹೊಳೆ ರವರು ರಾಜ್ಯ ಸಮಿತಿ ದಾಧಿಕಾರಿಗಳೊಂದಿಗೆ ನೇರವಾಗಿ ಗ್ರಾಮದ ಎಸ್.ಸಿ ಕಾಲೋನಿಗೆ ಭೇಟಿ ನೀಡಿ, ಅಲ್ಲಿನ ಮೂಲಭೂತ ಸೌಕರ್ಯ ವಂಚಿತ ಕುಟುಂಬಗಳ ಕುಂದು–ಕೊರತೆಗಳನ್ನು, ತೊಂದರೆಗಳನ್ನು ಖುದ್ದು ಪರಿಶೀಲಿಸಿದರು. ಕುಟುಂಬಗಳು ನೀಡಿದ ಮೌಖಿಕ ದೂರನ್ನು ಸ್ವೀಕರಿಸಿದರು.

ಅದ್ದೂರಿ ಸ್ವಾಗತ:ಕುಡತಿನಮಗ್ಗಿ ಗ್ರಾಮದ ಕುಲಬಾಂಧವರು ಅದ್ದೂರಿ ಮೆರವಣಿಗೆ ಮೂಲಕ ಸಂಸ್ಥಾಪಕ ರಾಜ್ಯಾಧ್ಯಕ್ಷರು ಮತ್ತು ರಾಜ್ಯ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

ಹಿರಿಯರ ಮೆಚ್ಚುಗೆ:ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರರಾದ ಹನುಮಂತಣ್ಣನವರು ಮಾತನಾಡಿ, "ನನ್ನ 30 ವರ್ಷದ ಅನುಭವದಲ್ಲಿ ಸಂಸ್ಥಾಪಕ ರಾಜ್ಯಾಧ್ಯಕ್ಷರು ಗ್ರಾಮೀಣ ಪ್ರದೇಶದಲ್ಲಿ ರಾಜ್ಯಮಟ್ಟದ ರಾಜ್ಯ ಸಮಿತಿ ಸಭೆ ಮಾಡಿರುವುದು ತುಂಬಾ ಖುಷಿ ಪಡುವಂತಹ ವಿಚಾರ, ಸಂಘಟನೆ ಬಗ್ಗೆ ಹೆಮ್ಮೆ ಇದೆ" ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಶ್ರೀ ಮಿಲಿಂದ ಐಹೊಳೆ ರವರು ವಹಿಸಿದ್ದರು. ಸಭೆಯನ್ನು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ–ದರು.

ನೂತನ ಪದಾಧಿಕಾರಿಗಳ ಆಯ್ಕೆ:ಸಭೆಯಲ್ಲಿ ಮಹಿಳಾ ಮತ್ತು ಪುರುಷ ರಾಜ್ಯ ಸಮಿತಿ ಪದಾಧಿಕಾರಿಗಳು, ವಿವಿಧ ಜಿಲ್ಲೆಗಳ ಜಿಲ್ಲಾಧ್ಯಕ್ಷರು ಭಾಗವಹಿಸಿದ್ದರು. ಇದೇ ವೇಳೆ ನೂತನವಾಗಿ ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಯ ತಾಲೂಕು ಅಧ್ಯಕ್ಷರುಗಳು ಮತ್ತು ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಸಿದರು. ಆಯ್ಕೆಯಾದ ಎಲ್ಲಾ ನೂತನ ಪದಾಧಿಕಾರಿಗಳಿಗೆ ಭೀಮ ವಂದನೆಯ ಮುಖಾಂತರ ಸ್ವಾಗತಿಸಲಾಯಿತು.

ಮುಂದಿನ ದಿನಮಾನಗಳಲ್ಲಿ ವಿಜಯನಗರ ಜಿಲ್ಲೆ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಭೀಮ ಧ್ವನಿ ಸಂಘಟನೆಯನ್ನು ಕಟ್ಟಕಡೆಯ ಗ್ರಾಮದವರೆಗೂ ಕಟ್ಟಿ ಬೆಳೆಸುತ್ತೇವೆ ಎಂದು ನೂತನವಾಗಿ ಆಯ್ಕೆಯಾದ ಕೊಪ್ಪಳ ಜಿಲ್ಲೆಯ ಮಹಿಳಾ ಘಟಕದ ಜಿಲ್ಲಾಧ್ಯಕ್ಷರು ಹೇಳಿದರು.

ಸಭೆಯನ್ನು ಉದ್ದೇಶಿಸಿ ಬಸವರಾಜ ಕಟ್ಟಿಮನಿ, ಮಹಾಲಿಂಗ ಗಗ್ಗರಿ, ವೀಣಾ ಹುಚ್ಚನಟ್ಟಿ, ಸಂತೋಷ ಗುಡ್ಡಪ್ಪನವರ, ವಿಜಯನಗರ ಜಿಲ್ಲೆಯ ಜಿಲ್ಲಾ ಅಧ್ಯಕ್ಷರಾದ ಲಕ್ಷ್ಮಣ ಕೆಎಂ ರವರು ಮಾತನಾಡಿದರು.

# ಹೂವಿನಹಡಗಲಿಯಲ್ಲಿ ರಂಗು ರಂಗಿನ ದಾಂಡಿಯಾ ಉತ್ಸವ



ವರದಿ : ಡಿ.ಪರಶುರಾಮಪ್ಪ

ಹೂವಿನಹಡಗಲಿ, 13– ಮಲ್ಲಿಗೆ ಪಟ್ಟಣದಲ್ಲಿ ಇದೇ ಮೊದಲ ಬಾರಿಗೆ ದಸರಾ ನವರಾತ್ರಿ ಅಂಗವಾಗಿ ಇಲ್ಲಿನ ಲೇಡಿಸ್ ಕಲ್ಚರಲ್ ಕ್ಲಬ್ ವತಿಯಿಂದ ದಾಂಡಿಯಾ ಉತ್ಸವ 2026 ಆಯೋಜಿಸಲಾಗಿತ್ತು.

ಪಟ್ಟಣದ ಹೊಳಗುಂದಿ ರಸ್ತೆಯಲ್ಲಿನ ಪಂಚಮಸಾಲಿ ಸಮುದಾಯ ಭವನದಲ್ಲಿ ನಡೆದ ದಾಂಡಿಯಾ ಉತ್ಸವದ ನೃತ್ಯಗಳಲ್ಲಿ ಮಕ್ಕಳು ಯುವತಿಯರು ಮಧ್ಯ ವಯಸ್ಸಿನ ಗೃಹಿಣಿಯರು ಸೇರಿದಂತೆ 60 ಕ್ಕೂ ಹೆಚ್ಚು ಮಹಿಳೆಯರು

ಭಾಗವಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಎಲ್ ಕೃಷ್ಣನಾಯಕ ಮಲ್ಲಿಗೆ ಪಟ್ಟಣದಲ್ಲಿ ಇದೇ ಮೊದಲ ಬಾರಿಗೆ ದಾಂಡಿಯಾ ಉತ್ಸವ ಆಯೋಜಿಸಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಹಿಳೆಯರು ತಮ್ಮ ಮನೆ ವೈಯಕ್ತಿಕ ಕೆಲಸಗಳ ಒತ್ತಡದ ನಡುವೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ಉಲ್ಲಾಸ ಉತ್ಸಾಹ ಸಂತೋಷ ಲಭಿಸುತ್ತದೆ ಎಂದು ತಿಳಿಸಿದರು.

ಲೇಡೀಸ್ ಕಲ್ಚರಲ್ ಕ್ಲಬ್ ಆಯೋಜಿಸುವ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಹಕಾರ ನೀಡುವುದಾಗಿ ಹೇಳಿದರು.

ಮೊದಲಿಗೆ ಶಕ್ತಿ ಅಧಿ ದೇವತೆ ದುರ್ಗಾಮಾತೆಗೆ ಎಲ್ಲರೂ ಸಾಮೂಹಿಕವಾಗಿ ಪೂಜೆ ಸಲ್ಲಿಸಿದರು.

ಲೇಡೀಸ್ ಕಲ್ಚರಲ್ ಕ್ಲಬ್ ನ ಸಂಚಾಲಕರಾದ ಲಕ್ಷ್ಮಿ ಬೀರಬ್ಬಿ, ವಿ ಬಿ ಸಹನಾ,ಡಾ ಸುಷ್ಮಾ ನವೀನ್, ಪೂಜಾ ರಾಘವೇಂದ್ರ ಇವರ ನೇತೃತ್ವದಲ್ಲಿ ದಾಂಡಿಯಾ ಉತ್ಸವವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕಾಲ ಮಹಿಳೆಯರಿಗೆ

ಸೂಕ್ತ ನೃತ್ಯ ನಿರ್ದೇಶನ ಮಾಡಿದ್ದಾರೆ. ಕಾರ್ಯಕ್ರಮದಲ್ಲಿ ನೃತ್ಯ ನಿರ್ದೇಶಕ ಸತೀಶ್ ರವರನ್ನು

ಕ್ಲಬ್ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಒಟ್ಟಾರೆ ಹೂವಿನ ಹಡಗಲಿ ತಾಲೂಕು ಕೇಂದ್ರದಲ್ಲಿ ದಾಂಡಿಯಾ ಉತ್ಸವ ಮೆರುಗು ನೀಡಿತು.ಮಹಿಳಾ ವೈದ್ಯರು,

ಅಭಿಯಂತರರು, ಖಾಸಗಿ ವಲಯದ ಕಾರ್ಯಕರ್ತೆ ಯರು,ಗೃಹಿಣಿಯರ ಪ್ರತಿಭಾ ಪ್ರದರ್ಶನಕ್ಕೆ ದಾಂಡಿಯಾ ಉತ್ಸವವು ವೇದಿಕೆ ಒದಗಿಸಿತು.

ಮಹಿಳೆಯರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ದಾಂಡಿಯಾ ಉತ್ಸವ ಆಯೋಜಿಸಲಾಗಿದೆ.

ಎಲ್ಲರ ಸಹಕಾರದಿಂದ ಯಶಸ್ವಿಯಾಗಿ ನೆರವೇರಿತು ಎಂದು ಸಂಚಾಲಕರು ತಿಳಿಸಿದರು.

ಜೆ ಎಸ್ ಎಸ್ ಸಿ ಬಿ ಎಸ್ ಸಿ ಪಬ್ಲಿಕ್ ಶಾಲೆಯ ನೃತ್ಯ ಶಿಕ್ಷಕ ಸತೀಶ್ ಸತತ ಒಂದು ತಿಂಗಳ

# ನವರಾತ್ರಿ ಅಂಗವಾಗಿ ಜೈ ಭೀಮ್ ನಗರದಲ್ಲಿ ಅನ್ನ ಸಂತರ್ಪಣೆ



ಹೊಸಪೇಟೆ, 13–ದಸರಾ ಹಬ್ಬದ ನವರಾತ್ರಿ ನಿಮಿತ್ತ ಒಂದನೇ ವಾರ್ಡ್ ಜೈ ಭೀಮ್ ನಗರದ ಜನರು ಶ್ರೀ ಬನ್ನಿ ಮಹಾಂಕಾಳಿ ದೇವಿಗೆ ಅಲಂಕಾರ ಮಾಡಿ ಪೂಜೆ ಸಲ್ಲಿಸಿ ಅನ್ನ ಸಂತರ್ಪಣೆ ಮಾಡಿದರು.

ಕೆಂಚಮ್ಮ ದೇವಿ, ಗಾಳೆಮ್ಮ ದೇವಿ ಮತ್ತು ಸುಂಕಲ ತಾಯಮ್ಮ ದೇವಿಯ ಪಲ್ಲಕ್ಕಿಗಳಿಗೆ ಪೂಜೆ ಸಲ್ಲಿಸಿದರು.ನಂತರ ಬನ್ನಿ ಮಹಂಕಾಳಿ ದೇವಿ ಪೂಜೆಗಾಗಿ ಗಂಗೆ ಪೂಜೆ ಸಲ್ಲಿಸಿ ನೂರಾರು ಮಕ್ಕಳು ಕಳಶ ಒತ್ತು ದೇವಸ್ಥಾನದತ್ತ ಹೆಜ್ಜೆ ಹಾಕಿದ್ದು ನೋಡುಗರ ಕಣ್ಮನ ಸೆಳೆಯುವಂತಿತ್ತು.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ ಪಟ್ಟಣದಲ್ಲಿ ಸುಮಾರು ವರ್ಷಗಳಿಂದ ಬನ್ನಿ ಮಹಾಕಾಳಿ ದೇವಸ್ಥಾನದ ಸಮಿತಿಯಿಂದ ಸರ್ವಧರ್ಮದ ಜನಾಂಗದವರು ಒಗ್ಗೂಡಿ ಅನ್ನ ಸಂತರ್ಪಣೆ ಮಾಡಿದ್ದು ಕಂಡುಬಂತು.

ಈ ಕುರಿತು ಮುಖಂಡ ಹಳ್ಳಿ ಹನುಮಂತಪ್ಪ (ಶಿವಪ್ಪ)ಮಾತನಾಡಿ ಎಲ್ಲಾ ವರ್ಗದವರು ಸೌಹಾರ್ದತೆಯಿಂದ ಬದುಕಬೇಕು ಧಾರ್ಮಿಕ ಮತ್ತು ಸಂಸ್ಕೃತಿ ಯುವಕರು ಬೆಳೆಸಿಕೊಳ್ಳಬೇಕು. ಇದರ ಜೊತೆಗೆ ಶಿಕ್ಷಣವನ್ನು ಪಡೆದು ಉದ್ಯೋಗಗಳನ್ನು ಪಡೆದುಕೊಳ್ಳಬೇಕು ಆಗ ಮಾತ್ರ ಸಮಾಜಕ್ಕೆ ಏನಾದರೂ ಕೊಡುಗೆ ಕೊಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಎಂ ಯಲ್ಲಪ್ಪ ಪುರಸಭೆ ಮಾಜಿ ನಾಮ ನಿರ್ದೇಶನ ಸದಸ್ಯ ಮಾತನಾಡಿ ಇಲ್ಲಿ ಟಿ ಬಿ ಬೋರ್ಡ್ ಗೆ ಸಂಬದ್ಧ ಖಾಲಿ ಇರುವ ಜಾಗಗಳನ್ನು ಸುಮಾರು 25 ವರ್ಷಗಳಿಂದ ವಾಸಿಸುವ ಬಡ ಜನಗಳಿಗೆ ಕೊಟ್ಟು ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು.ಈಗಿನ ಆಡಳಿತ ಸರ್ಕಾರ ಕಮಲಾಪುರ ಪಟ್ಟಣದ 1ನೇ ವಾರ್ಡಿನ ಜನಗಳ ಗೋಳನ್ನು ಆಲಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿವ ಶರಣಪ್ಪ,ಕೆಂಪು ವೀರೇಶ, ಮೇಷನ್ ವೀರೇಶ,ಕೋಳೂರು ಹುಲಿಗೆಮ್ಮ,ನೀಲಮ್ಮ,ಹನುಮವ್ವ,ದುಗ ರ್ವವ್ವ, ಗೌರಮ್ಮ, ಚಂದ್ರ, ಗಿಡ್ಡ, ಬಸಪ್ಪ, ಶ್ರೀನಿವಾಸ,ಸುಬ್ಬು, ಪೂಜಾರಿ ಶಿವರಾಮಪ್ಪ, ಮಲ್ಲಿಕಾರ್ಜುನ,ಗುಂಡು ಪರ್ಸ, ಪೂಜಾರಿ ಕೆಂಚಪ್ಪ, ಪೂಜಾರಿ ಗಾಳಪ್ಪ, ಹುಸೇನ್, ಗಾಳೆಪ್ಪ, ನಡಿಗೇರಿ ಚಿದಾನಂದ, ಇತರರು ಇದ್ದರು.

**"ಉಜ್ಜಿನಿ ದಸರಾ ಮಹೋತ್ಸವದ ಭಕ್ತಿಯ ವೇದಿಕೆಯಲ್ಲಿ ಜನಸೇವೆಯ ಪ್ರತಿಧ್ವನಿ ವಿಶ್ವಕರ್ಮ ಸಮುದಾಯದ ಏಳಿಗೆಗೆ ಅಭಿವೃದ್ಧಿಯ ಭರವಸೆ"**

# ಜನರ ವಿಶ್ವಾಸಕ್ಕೆ ಗೌರವ, ಸಮುದಾಯದ ಆಶಯಗಳಿಗೆ ಸ್ಪಂದನೆ

## ಕೂಡ್ಲಿಗಿಯ ಸಮಗ್ರ ಪ್ರಗತಿಗೆ ಬದ್ಧತೆ – ಇದೇ ಜನಸೇವೆಯ ಸಂಕಲ್ಪ



ಕೂಡ್ಲಿಗಿ, 13– ಉಜ್ಜಿನಿಯಲ್ಲಿ ಅಕ್ಟೋಬರ್ 12, 2026ರಂದು ನಡೆದ ಪರಾಭವ ನಾಮ ಸಂವತ್ಸರದ 47ನೇ ವರ್ಷದ ಶರನ್ನವರಾತ್ರಿ ಹಾಗೂ ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಶ್ರೀ ದೇವಿ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಶಾಸಕರಾದ ಡಾ. ಶ್ರೀನಿವಾಸ್ ಎನ್.ಟಿ. ಅವರು ಭಾಗವಹಿಸಿ, ಧಾರ್ಮಿಕ ಪರಂಪರೆ, ಸಾಮಾಜಿಕ ಸಾಮರಸ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಕುರಿತು ಅರ್ಥಪೂರ್ಣವಾಗಿ ಮಾತನಾಡಿದರು.

ವಿಶ್ವಕರ್ಮ ಸಮುದಾಯದ ಧಾರ್ಮಿಕ ಪರಂಪರೆ, ಶಿಲ್ಪಕಲೆ ಮತ್ತು ಸಾಂಸ್ಕೃತಿಕ ಕೊಡುಗೆಯ ಮಹತ್ವವನ್ನು ಸಾರುವ ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಏಕತೆ, ಶಾಂತಿ ಹಾಗೂ ಪರಸ್ಪರ ಗೌರವವನ್ನು ಬಲಪಡಿಸುತ್ತವೆ. ಸಮುದಾಯದ ಅಭಿವೃದ್ಧಿ ಕಾರ್ಯಗಳು ಹಾಗೂ ಸಮುದಾಯ ಭವನದ ಬೇಡಿಕೆಗಳ ಈಡೇರಿಕೆಗೆ ಅಗತ್ಯ ಪ್ರಯತ್ನ ಮಾಡುವುದಾಗಿ ಶಾಸಕರು ಭರವಸೆ ನೀಡಿದರು.

ಕಳೆದ ಮೂರೂವರೆ ವರ್ಷಗಳಲ್ಲಿ ಕ್ಷೇತ್ರದ 200ಕ್ಕೂ ಹೆಚ್ಚು ದೇವಸ್ಥಾನಗಳಿಗೆ ಅನುದಾನ ಒದಗಿಸುವ ಕಾರ್ಯ ನಡೆದಿರುವುದನ್ನು ಉಲ್ಲೇಖಿಸಿದ ಶಾಸಕರು, ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿ, ಸಮುದಾಯದ ಬೇಡಿಕೆಗಳ ಈಡೇರಿಕೆ, ಬರಗಾಲದ ಸಮಸ್ಯೆಗಳಿಗೆ ಪರಿಹಾರ ಹಾಗೂ ಮೂಲಸೌಕರ್ಯಗಳ ಬಲವರ್ಧನೆಗೆ ಮುಂದಿನ ದಿನಗಳಲ್ಲಿಯೂ ಶ್ರಮಿಸುವ ಭರವಸೆ ನೀಡಿದರು.

ಬಡವರು, ರೋಗಿಗಳು ಹಾಗೂ ಸಂಕಷ್ಟದಲ್ಲಿರುವ ಜನರ ನೋವಿಗೆ ಸ್ಪಂದಿಸುವುದೇ ನಿಜವಾದ ಜನಸೇವೆ ಎಂದು ಅಭಿಪ್ರಾಯಪಟ್ಟ ಅವರು, ಕೂಡ್ಲಿಗಿ ಕ್ಷೇತ್ರದ ಕಟ್ಟಕಡೆಯ ಗ್ರಾಮಕ್ಕೂ ಮೂಲಸೌಕರ್ಯ ಕಲ್ಪಿಸುವುದು, ದೇವಸ್ಥಾನಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು ಹಾಗೂ ಸಮುದಾಯಗಳ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸುವುದು ತಮ್ಮ ಬದ್ಧತೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ವಿಜಯಕುಮಾರ್ ಪತ್ತಾರ್, ಅಧ್ಯಕ್ಷರು, ಶ್ರೀ ವಿಶ್ವಕರ್ಮ ಮಹಾ ಒಕ್ಕೂಟ (ರಿ.), ಬೆಂಗಳೂರು; ಮೋಹನ್ ನರಗುಂದ, ಅಧ್ಯಕ್ಷರು, ಶ್ರೀ ಜ್ಞಾನ ಮೌನೇಶ್ವರ ದೇವಸ್ಥಾನ ಹಾಗೂ ಮಠದ ವಿಕಾಸ ಟ್ರಸ್ಟ್ ಕಮಿಟಿ, ಶ್ರೀ ಕ್ಷೇತ್ರ ವರವಿ; ಚಂದ್ರಕಾಂತ್ ಸೂನಾರ್, ಅಧ್ಯಕ್ಷರು, ವಿಶ್ವಕರ್ಮ ವಿಕಾಸ ವೇದಿಕೆ, ಬಳ್ಳಾರಿ ಸೇರಿದಂತೆ ಸಮಾಜದ ಹಿರಿಯರು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

# ಆರಂಭಿಕ ಚಿಕಿತ್ಸೆ ಹಾಗೂ ಕುಟುಂಬದ ಬೆಂಬಲದಿಂದ ಮಾನಸಿಕ ಕಾಯಿಲೆ ಗುಣಮುಖ ಸಾಧ್ಯ – ನ್ಯಾ.ಮೋಹನ್



ಬಳ್ಳಾರಿ,13– ವ್ಯಕ್ತಿಯಲ್ಲಿ ಪದೇ ಪದೇ ಎದುರಾಗುವ ತೀವ್ರ ಸಂಕಷ್ಟಗಳು, ಅತಿಯಾದ ಮಾನಸಿಕ ಒತ್ತಡ ಹಾಗೂ ಮಿತಿಮೀರಿದ ಆಲೋಚನೆಗಳಿಂದ ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆರಂಭಿಕ ಹಂತದಲ್ಲಿಯೇ ರೋಗಿಯ ಮನಃಸ್ಥಿತಿಯನ್ನು ಅರ್ಥೈಸಿಕೊಂಡು, ಕುಟುಂಬದ ಸದಸ್ಯರ ಸಹಕಾರ ಮತ್ತು ಪ್ರೀತಿಯೊಂದಿಗೆ ಸೂಕ್ತ ಚಿಕಿತ್ಸೆ ಕೊಡಿಸಿದರೆ ಕಾಯಿಲೆಯನ್ನು ಬೇಗನೆ ಗುಣಪಡಿಸಬಹುದು ಎಂದು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ವಿಮರ್ಶಾ ಮಂಡಳಿಯ ಅಧ್ಯಕ್ಷರಾದ ಮೋಹನ್ ಹೆಚ್.ಎ ಅವರು ಹೇಳಿದರು.

ನಗರದ ಬಿ.ಐ.ಟಿ.ಎಂ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ–2026' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆ ಮಾನಸಿಕ ರೋಗಿಗಳನ್ನು ಮನೆಯಲ್ಲಿ ಇರಿಸಿಕೊಳ್ಳುವುದು ಅಪಾಯಕಾರಿ ಎಂಬ ತಪ್ಪು ಕಲ್ಪನೆ ಇತ್ತು. ಆದರೆ ಕಳೆದ ಮೂರು ದಶಕಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆದ ಅಭೂತಪೂರ್ವ ಸಂಶೋಧನೆಗಳು ಮತ್ತು ಸುಧಾರಿತ ಚಿಕಿತ್ಸಾ ಪದ್ಧತಿಗಳಿಂದಾಗಿ ರೋಗಿಗಳಿಗೆ ಮನೆಯಲ್ಲಿಯೇ ಆರೈಕೆ ಹಾಗೂ ಚಿಕಿತ್ಸೆ ನೀಡಲು ಸಾಧ್ಯವಿದೆ. ಪ್ರತಿಯೊಬ್ಬರೂ ಆತ್ಮಸ್ಥೈರ್ಯ ಮತ್ತು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳುವ ಮೂಲಕ ಇಂತಹ ಸಮಸ್ಯೆಗಳಿಂದ ಹೊರಬರಬಹುದು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಮಾತನಾಡಿ, ವಿದ್ಯಾರ್ಥಿಗಳು ಅನಗತ್ಯ ಒತ್ತಡ ಹಾಗೂ ಖಿನ್ನತೆಗೆ ಒಳಗಾಗಬಾರದು. ಯಾವುದೇ ಮಾನಸಿಕ ಸಮಸ್ಯೆ ಅಥವಾ ಸಂಕಷ್ಟಗಳಿದ್ದಾಗ ಮುಕ್ತವಾಗಿ ಪಾಲಕರೊಂದಿಗೆ ಮನದಾಳದ ನೋವನ್ನು ಹಂಚಿಕೊಂಡು ಮಾನಸಿಕವಾಗಿ ಸದೃಢರಾಗಬೇಕು ಎಂದರು.

ಪ್ರಸ್ತುತ 'ಮನೋಚೈತನ್ಯ' ಕಾರ್ಯಕ್ರಮದಡಿ ಪ್ರತಿ ಮಂಗಳವಾರ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ ನಡೆಸಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾನಸಿಕ ಆರೋಗ್ಯ ರಕ್ಷಣೆಯ ಕುರಿತು ಪ್ರತಿಜ್ಞಾವಿಧಿ ಬೋಧಿಸಲಾಯಿತು. ವಿಶ್ವ ದೃಷ್ಟಿ ದಿನದ ಅಂಗವಾಗಿ ಡಾ. ಅಪರ್ಣಾ ಅವರು ಕಣ್ಣಿನ ಆರೈಕೆ ಹಾಗೂ ನೇತ್ರದಾನದ ಮಹತ್ವದ ಕುರಿತು ಜಾಗೃತಿ ಮೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಐ.ಟಿ.ಎಂ ಕಾಲೇಜಿನ ಅಧ್ಯಕ್ಷ ಡಾ. ಯಶವಂತ್ ಭೂಪಾಲ್ ವಹಿಸಿದ್ದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಅಲಕಾನಂದ ಡಿ. ಮಳಗಿ, ಬಿ.ಐ.ಟಿ.ಎಂ ಕಾಲೇಜಿನ ಪ್ರಾಂಶುಪಾಲ ಡಾ. ಯಡವಳ್ಳಿ ಬಸವರಾಜ್ ಭಾಗವಹಿಸಿದ್ದರು. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಕಾಶ್ ಎಸ್. ಕರ್ಜಗಿ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಶಾಂತಕುಮಾರ್ ಹೆಚ್., ಶರ್ಮಾಸ್ ವಲಿ, ರಂಜಿತಾ ಜಿ., ಸಾಹೇರಾ ಬಾನು, ನಿರಂಜನ, ವೀರಭದ್ರಪ್ಪ, ರಮೇಶ್ ಬಾಬು ಸೇರಿದಂತೆ ಕಾಲೇಜಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಮಕ್ಕಳ ಪದ್ಯಗಳಿಗೆ ಅಹ್ವಾನ



ವರದಿ : ಡಿ.ಪರಶುರಾಮಪ್ಪ

ಹೂವಿನಹಡಗಲಿ, 13–ಕೂಡ್ಲಿಗಿ ತಾಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಉಚಿತವಾಗಿ ಮಕ್ಕಳ ಪದ್ಯಗಳ ಸಂಕಲನವೊಂದನ್ನು ನೀಡಬೇಕೆಂಬ ಉದಾತ್ತ ಸಂಕಲ್ಪವನ್ನು ತಿಪ್ಪೇಸ್ವಾಮಿ ಕೆ. (ಸಹಶಿಕ್ಷಕರು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಟಿ. ಬಸಾಪುರ) ಅವರು ಹೊಂದಿದ್ದಾರೆ.

ಅವರ ಆಶಯದಂತೆ, ಶೇಖರಯ್ಯ ಟಿ. ಎಚ್. ಎಂ. ಇವರ ಸಂಪಾದಕತ್ವದಲ್ಲಿ ಮೂಡಿಬರಲಿರುವ 'ಮಕ್ಕಳ ಪದ್ಯಗಳ ಸಂಕಲನ'ದಲ್ಲಿ ನಿಮ್ಮ ಅಭಿವ್ಯಕ್ತಿಗೂ ಅವಕಾಶವಿದೆ. ಈ ಬೃಹತ್ ಕಾರ್ಯದಲ್ಲಿ ತಮ್ಮ ಸ್ವರಚಿತ ಪದ್ಯವೂ ಸೇರ್ಪಡೆಯಾಗಲು, ಕೆಳಗಿನ ನಿಬಂಧನೆಗಳಿಗೊಳಪಟ್ಟು ನಿಮ್ಮ ಪದ್ಯವನ್ನು ಕಳುಹಿಸಿಕೊಡಲು ಆಯೋಜಕರು ತಿಳಿಸಿದ್ದಾರೆ.

ನಿಯಮಗಳು ಮತ್ತು ನಿಬಂಧನೆಗಳು:ಸ್ವರಚಿತ ಪದ್ಯ: ಪದ್ಯವು ನಿಮ್ಮ ಸ್ವಂತ ರಚನೆಯಾಗಿರಬೇಕು. (ಯಾವುದೇ ಕಾರಣಕ್ಕೂ ಎಐ ಅಥವಾ ಚಾಟ್ ಜಿ ಪಿ ಟಿ ಮುಖಾಂತರ ರಚಿಸಿರಬಾರದು).

ಸೌಹಾರ್ದತೆ: ಪದ್ಯವು ಯಾವುದೇ ವ್ಯಕ್ತಿ, ಜಾತಿ, ಧರ್ಮ, ಪ್ರದೇಶ ಅಥವಾ ವೃತ್ತಿಯನ್ನು ಅಗೌರವಿಸುವ ರೀತಿಯಲ್ಲಿ ಇರಬಾರದು.

ಮಕ್ಕಳ ಮನೋಗುಣ: ಪದ್ಯವು ಮಕ್ಕಳ ವಯಸ್ಸಿಗೆ ತಕ್ಕಂತೆ, ಸರಳ ಹಾಗೂ ಮನರಂಜನಾತ್ಮಕವಾಗಿರಬೇಕು.

ಒಂದು ಪದ್ಯದ ಮಿತಿ: ಒಬ್ಬರು ಒಂದೇ ಪದ್ಯವನ್ನು ಕಳುಹಿಸಿಕೊಡಬೇಕು.

ಸಮ್ಮತಿ ಪತ್ರ: ಸಂಕಲನದಲ್ಲಿ ಪದ್ಯವನ್ನು ಬಳಸಿಕೊಳ್ಳಲು ನಿಮ್ಮ ಸಂಪೂರ್ಣ ಅನುಮತಿಯ ಪತ್ರವನ್ನು ಪದ್ಯದ ಜೊತೆ ಕಳುಹಿಸಬೇಕು.

ಸಂಭಾವನೆ: ಸಂಕಲನದಲ್ಲಿ ಪದ್ಯ ಬಳಸಿದ್ದಕ್ಕೆ ಯಾವುದೇ ಗೌರವ ಸಂಭಾವನೆ ಇರುವುದಿಲ್ಲ.

ಪ್ರತಿಗಳ ವಿತರಣೆ: ಆಯ್ಕೆಯಾದ ಪ್ರತಿ ಕವಿಗಳಿಗೂ ಗೌರವಪೂರ್ವಕವಾಗಿ 2 (ಎರಡು) ಪ್ರತಿಗಳನ್ನು ಉಚಿತವಾಗಿ ನೀಡಲಾಗುವುದು.

ಆಯ್ಕೆ ಪ್ರಕ್ರಿಯೆ: ಪದ್ಯದ ಗುಣಮಟ್ಟವೇ ಆಯ್ಕೆಗೆ ಮುಖ್ಯ ಮಾನದಂಡ. ಆಯ್ಕೆ ಸಮಿತಿಯು ಒಪ್ಪಿದ ಪದ್ಯಗಳನ್ನು ಮಾತ್ರ ಸಂಕಲನಕ್ಕೆ ಬಳಸಿಕೊಳ್ಳಲಾಗುತ್ತದೆ.

ಪದ್ಯಗಳನ್ನು ಕಳುಹಿಸಬೇಕಾದ ವಿಳಾಸ:
ಶ್ರೀ ಶೇಖರಯ್ಯ ಟಿ. ಎಚ್. ಎಂ. (ಶಿಕ್ಷಕರು)
'ಕೇದಾರ ನಿವಾಸ',
ಶ್ರೀ ಶಾರದಾ ಶಾಲೆಯ ಹತ್ತಿರ,
ಕೂಡ್ಲಿಗಿ ಪಟ್ಟಣ ಹಾಗೂ ಅಂಚೆ,
ಕೂಡ್ಲಿಗಿ ತಾಲೂಕು, ವಿಜಯನಗರ ಜಿಲ್ಲೆ 583 135 ತಮ್ಮ ಪದ್ಯಗಳನ್ನು ವಾಟ್ಸಾಪ್ ಮತ್ತು ಇಮೇಲ್ ಮೊ.ಸಂ.9164241520 ಮೂಲಕವೂ ಕಳುಹಿಸುವಂತೆ ತಿಳಿಸಿದ್ದಾರೆ.

# ದುರ್ಗದ ಹುಲಿ ರಾಜವೀರ ಮದಕರಿ ನಾಯಕ ಜಯಂತಿ ಆಚರಣೆ



ಹೊಸಪೇಟೆ, 13– ವಿಜಯನಗರ ಸಾಮ್ರಾಜ್ಯದ ವೀರ ಸೇನಾನಿ, ದುರ್ಗದ ಹುಲಿ ಎಂದೇ ಖ್ಯಾತರಾದ ಶ್ರೀ ರಾಜವೀರ ಮದಕರಿ ನಾಯಕ ಅವರ ಜಯಂತಿಯನ್ನು ಇಂದು ಹೊಸಪೇಟೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ವಾಲ್ಮೀಕಿ ನಾಯಕ ಸಮಾಜ, ಹೊಸಪೇಟೆ ಹಾಗೂ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ, ಯುವ ಘಟಕದ ವತಿಯಿಂದ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ನಾಯಕ ಸಮುದಾಯದ ಗುರುಗಳು, ಹಿರಿಯರು, ದೈವಸ್ಥ ಯಜಮಾನರು ಹಾಗೂ ಯುವಕರು ಸೇರಿದಂತೆ ಸಮುದಾಯದ ಹಲವರು ಭಾಗವಹಿಸಿ ಮದಕರಿ ನಾಯಕ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕಿಚಡಿ ಶ್ರೀನಿವಾಸ್ ಗುಜ್ಜಲ ನಾಗರಾಜ್ ಕಟಗಿ ಜಂಬಯ್ಯ, ಗುಜ್ಜಲ ಗಣೇಶ, ತಾರಿಹಳ್ಳಿ ಆನಂದ್, ಜೋಗಿ ತಾಯಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ತುಂಗಭದ್ರಾ ಜಲಾಶಯದಿಂದ ತೆಲಂಗಾಣಕ್ಕೆ ನೀರು ಬಿಡುಗಡೆ




ಹೊಸಪೇಟೆ, 13– ವಿಜಯನಗರ ಜಿಲ್ಲೆಯ ಹೊಸಪೇಟೆ ಹೊರವಲಯದಲ್ಲಿರುವ ತುಂಗಭದ್ರಾ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ ನೀರು ಬಿಡುಗಡೆ ಮಾಡಲಾಗಿದೆ.

ತುಂಗಭದ್ರಾ ನದಿ ಮೂಲಕ ನೀರು ಹರಿಸಲಾಗುತ್ತಿದ್ದು, ಈ ಬಾರಿ ತೆಲಂಗಾಣ ರಾಜ್ಯಕ್ಕೆ ಒಟ್ಟು 3.50 ಟಿಎಂಸಿ ನೀರನ್ನು ಮೀಸಲಿಡಲಾಗಿದೆ. ಅದರಲ್ಲಿ ಸದ್ಯ 3 ಟಿಎಂಸಿ ನೀರನ್ನು ಬಿಡುಗ–ಡೆ ಮಾಡುವಂತೆ ತೆಲಂಗಾಣ ಸರ್ಕಾರ ಮನವಿ ಮಾಡಿತ್ತು.

ತೆಲಂಗಾಣ ರಾಜ್ಯದ ಮನವಿಯ ಮೇರೆಗೆ ಟಿಬಿ ಬೋರ್ಡ್ ನದಿ ಮೂಲಕ ನೀರು ಹರಿಸುತ್ತಿದೆ.

# ಅಹಾರ ರೈಸ್ ನೂತನ ಮಳಿಗೆ ಆರಂಭ




ಹೊಸಪೇಟೆ, 13– ಹೋಲ್ ಸೇಲ್ ದರದಲ್ಲಿ ಎಂಬ ಹೆಸರಿನಲ್ಲಿ ನಗರಕ್ಕೆ ಮತ್ತೊಂದು ದಿನಸಿ ಪೂ–ರೈಕೆ ಅಂಗಡಿ ಕಾಲೇಜ್ ರಸ್ತೆಯಲ್ಲಿ ತಲೆ ಎತ್ತಿದೆ. ನೂತನ ಅಂಗಡಿ ಆದುದರಿಂದ ಗ್ರಾಹಕರಿಗೆ ಸಾಕಷ್ಟು ಡಿಸ್ಕೌಂಟ್ ದೊರೆಯಲಿದೆ ಎಂಬ ನಂಬಿಕೆಯಿಂದ ಆರಂಭದ ದಿನವಾದ ಸೋಮವಾರ ಗ್ರಾಹಕರು ,ತಮ್ಮ ಮನೆಗಳಿಗೆ ಬೇಕಾದ ದಿನಸಿಗಳನ್ನು ತುಸು ಹೆಚ್ಚೆಂದೇ ಹೇಳಬಹುದಾದಷ್ಟನ್ನು ಕೊಂಡರು.

ಈ ರಸ್ತೆಯಲ್ಲಿ "ವಿ.ಎ.ಬಜಾರ್" ಮತ್ತು" ಮೋರ್ " ಅಂಗಡಿಗಳು ಕಾರ್ಯ ನಿರ್ವಹಿಸುತ್ತಿದ್ದು , ಈ ಎರಡೂ ವ್ಯಾಪಾರಿ ಮಳಿಗೆ ಗಳು ಗ್ರಾಹಕರನ್ನು ಆಕರ್ಶಿಸಲು ಡಿಸ್ಕೌಂಟ್ ಎಂಬ ಮಾಯಾ ಜಾಲ ಬೀಸುತ್ತಿದ್ದು, ಅದೇ ದಾರಿಯಲ್ಲಿ ಸ್ಪರ್ದಿಸಲು ಈಗ " ಆಹಾರ" ತುಸು ಹೆಚ್ಚೆನ್ನುವಷ್ಟು ರಿಯಾಯಿತಿ ನೀಡಿ ಗ್ರಾಹಕರನ್ನು ಆಕರ್ಶಿಸಿದೆ.

ಇದರಿಂದಾಗಿ ಸೋಮವಾರ ಸಂಜೆ ನಗರದ ಗ್ರಾಹಕರೆಲ್ಲಾ ಒಂದೇ ಮಳಿಗೆಯಲ್ಲಿ ಖರೀದಿ ಯಲ್ಲಿ ತೊಡಗಿದಂತೆ ಕಂಡುಬಂದಿತು.ರೈಸ್ ಮಾರಾಟ ಎ.ಪಿ.ಎಂ.ಸಿ ಯ ಧರ ದಂತೆ ಎಂದು ಪ್ರಚಾರ ಮಾಡುತ್ತಿದೆ.ಸಾವಿರದಷ್ಟು ವ್ಯಾಪಾರ ಮಾಡಿದರೆ ಒಂದು ಕೆಜಿ ಸಕ್ಕರೆ , ಎರಡು ಮತ್ತು ಮೂರುಸಾವಿರ ವ್ಯಾಪಾರಕ್ಕೆ ಹೆಚ್ಚಿನಆರ್ಕಶಕ ಬಹುಮಾನ ನೀಡಲಿದೆ

## ವಿಭಾಗೀಯ ಮಟ್ಟದ ಚಿತ್ರಕಲಾ ಸ್ಪರ್ಧೆ

# ಯಮನೂರಪ್ಪಗೆ ತೃತೀಯ ಬಹುಮಾನ



ವಿಜಯನಗರ (ಹೊಸಪೇಟೆ), 13– ರಾಯಚೂರು ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಕಲ್ಯಾಣ ಕರ್ನಾಟಕ ವಿಭಾಗೀಯ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೀರಿದ್ದರೆ ನಾಳೆ ಎಂಬ ಘೋಷವಾಕ್ಯದಡಿಯಲ್ಲಿ ನಮ್ಮ ಭೂಮಿ ನಮ್ಮ ನೀರು ನಮ್ಮ ಶಕ್ತಿ ಎಂಬ ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಹೊಸಪೇಟೆಯ ಸರ್ಕಾರಿ ಪ್ರೌಢಶಾಲೆ ಅನಂತಶಯನಗುಡಿಯ ವಿದ್ಯಾರ್ಥಿ ಯಮನೂರಪ್ಪ ಅವರು ತೃತೀಯ ಬಹುಮಾನದೊಂದಿಗೆ ರೂ.10,000 ನಗದು ಬಹುಮಾನ ಪಡೆದುಕೊಂಡಿದ್ದಾರೆ.

ಅಲ್ಲದೆ, ಹೊಸಪೇಟೆಯ ಕೆ.ಸಿ.ಎ. (KCA) ಶಾಲೆಯ ವಿದ್ಯಾರ್ಥಿ ಗೌತಮ್ ಕೆ. ಚಿತ್ರಗಾರ ಹಾಗೂ ಸರ್ಕಾರಿ ಪ್ರೌಢಶಾಲೆ ನೆಹರೂ ಕಾಲೋನಿಯ ವಿದ್ಯಾರ್ಥಿನಿ ಸಭಾ ಅಲಿಯಾ ಇಬ್ಬರಿಗೂ ಸಮಾಧಾನಕರ ಬಹುಮಾನವಾಗಿ ತಲಾ ರೂ.5,000 ನಗದು ಪ್ರಶಸ್ತಿ ಲಭಿಸಿದೆ.

ಸಾಧನೆಗೈದ ಮೂವರೂ ವಿದ್ಯಾರ್ಥಿಗಳನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ವೆಂಕಟೇಶ್ ರಾಮಚಂದ್ರಪ್ಪ ಹಾಗೂ ಬಳ್ಳಾರಿಯ ಜಿಲ್ಲಾ ಅಂತರ್ಜಲ ಅಭಿವೃದ್ಧಿ ಇಲಾಖೆಯ ಹಿರಿಯ ಭೂ ವಿಜ್ಞಾನಿ ಬಸಂತ್ ಅವರು ಅಭಿನಂದಿಸಿ, ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

'HOSAPETE NADIMIDITA ' KANNADA DAILY NEWSPAPER PRINTEDE BY RAMJEE NAIK R PUBLISHER AND OWNED BY RAMJEE NAIK R, PRINTED AT HOMBALI PRINTING, 3787/A/6-7C MAHENDRAKAR CIRCLE, GADAG KARNATAKA-582101
PRGI NO: KNKAN/26/A1167 PAGES-4, DATE 01/03/2026. PUBLISHED AT HN,93, KALLAHALLI VILLAGE, HOSPET POST, VIJAYANAGARA, -583201, KARNATAKA STATE, EDITOR:RAMJEE NAIK R, CELL-9448717472.